ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 248 RNI Number : KNKAN/25/A2770 20-09-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :248 ರಾಯಚೂರು 20-09-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ರೈತರನ್ನು ಉಳಿಸಲು ನಿಮ್ಮ ಬಳಿ ಬಂದಿದ್ದೇನೆ: ಸಿಎಂ ಡಿ.ಕೆ.ಶಿ

ಶಿವಮೊಗ್ಗ: ರೈತರನ್ನು ಉಳಿಸಬೇಕೆಂಬ ಉದ್ದೇಶದಿಂದ ರೈತರ ಬಳಿಯೇ ಬಂದಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ತೀರ್ಥಹಳ್ಳಿಯ ಯು.ಆರ್.ಅನಂತಮೂರ್ತಿ ಶಾಲಾ ಮೈದಾನಲ್ಲಿ ಕಸ್ತೂರಿ ರಂಗನ್ ವರದಿ ಕುರಿತು ಚರ್ಚೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮನ್ನು ಭೇಟಿ ಮಾಡಲು ಇದೊಂದು ವಿಶೇಷವಾದ ಅವಕಾಶ. ನಿಮ್ಮನ್ನು ಭೇಟಿ ಮಾಡುವ ಅವಕಾಶದ ಜೊತೆಗೆ ಅಪಾಯವೂ ಇದೆ. ಅಪಾಯವನ್ನು ಕಡಿಮೆ ಮಾಡಲು ಬಂದಿದ್ದೇನೆ.

ಕೊನೆಗೆ ಭೂಮಿ ರಕ್ಷಣೆ ಮಾಡಬೇಕು. ನಮಗೂ ಭೂಮಿಗೂ ನಂಟಿದೆ. ಕೇಂದ್ರ ಸರ್ಕಾರ ತಂದಿರುವ ವರದಿಯನ್ನು ವಾಪಸ್ ಕಳುಹಿಸುತ್ತಿದ್ದೇವೆ. ಆದರೆ ಕ್ಯಾಬಿನೇಟ್ ಮಿಟಿಂಗ್ ಮಾಡಬಹುದಾಗಿತ್ತು. ಅಲ್ಲದೇ ನಾನೇ ತೀರ್ಮಾನ ಮಾಡಬಹುದಾಗಿತ್ತು. ಇದಕ್ಕಾಗಿ ನಿಮ್ಮ ಜನಪ್ರತಿನಿಧಿಗಳ ಸಭೆ ಅಧಿವೇಶನ ಕರೆದಿದ್ದೇನೆ. ರೈತರನ್ನು ಉಳಿಸಲು ನಿಮ್ಮ ಬಳಿಗೆ ಬಂದಿದ್ದೇವೆ ಎಂದು ಹೇಳಿದರು.

ನಿಮ್ಮ ಬಳಿ ಬಂದಾಗ ಶಿವಮೊಗ್ಗ ಶಾಸಕರು ಒಳ್ಳೆಯ ಸ್ವಾಗತ ಕೋರಿದರು. ವಂದೇ ಮಾತರಂ ಗೀತೆ ಕುರಿತು ನಾನು ಎರಡು ಚರಣ ಮಾತ್ರ ಹಾಡಿದ್ದೇನೆ. ಅದು ನಮ್ಮ ನಿಲುವು. ನಾನು ರಾಜಕೀಯ ಮಾಡಲು ಬಂದಿದ್ದು, ಭಾವನೆ ಮೇಲೆ ಅಲ್ಲ, ಬದಲಾಗಿ ಜನರ ಜೀವನದ ಮೇಲೆ ಬಂದಿದ್ದೇನೆ. ಇದರಿಂದ



ನಾನು ಶಾಸಕರಿಗೆ ಇದನ್ನು ಇಲ್ಲಿಗೆ ಬಿಡಬೇಕು ಎಂದು ವಿನಂತಿ ಮಾಡುತ್ತೇನೆ ಎಂದರು.

ಹಾಡು ಹಾಡದೇ ಹೋದ್ರೆ ಹೋಗಲಿ. ಜನರ ಭಾವನೆ ಮೇಲೆ ಆಡಳಿತ ಇರಬೇಕು ಎಂದರು. ಜನ ಸೇವಾ ಇಲಾಖೆಯನ್ನು ಮಾಡಿದ್ದೇವೆ. ಸಚಿವರು ತಾಲೂಕುಗಳಿಗೆ ಹೋಗಬೇಕು. ಇದರಿಂದ ಜನರ ಭಾವನೆ ತಿಳಿಯಬೇಕು ಎಂದು ಪ್ರಜಾಸೇವಾ ಇಲಾಖೆ ಪ್ರಾರಂಭಿಸಿದ್ದೇವೆ ಎಂದು ಹೆಳಿದರು.

ಮಲೆನಾಡಿಗರು ಯಾರು ಸಹ ನನಗೆ ಹೇಳಲಿಲ್ಲ. ಮಂಗಳೂರು ಸಾಕಷ್ಟು ಅಭಿವೃದ್ಧಿ ಆಗಿದೆ. ಆದರೆ, ಜನ ವಲಸೆ ಹೋಗುತ್ತಿದ್ದಾರೆ. ಇದಕ್ಕೆ ನಾನು ಅಲ್ಲಿ ಪ್ರಥಮ ಕ್ಯಾಬಿನೆಟ್ ಮೀಟಿಂಗ್ ಮಾಡಿದೆ. ನನ್ನ ಹೆಜ್ಜೆಗೆ ಅಧಿಕಾರಿಗಳು ಹೆಜ್ಜೆ ಹಾಕಬೇಕಿದೆ. ಕರಾವಳಿ ಜೊತೆಗೆ ಮಲೆನಾಡನ್ನು ಸೇರಿಸಿದ್ದೇನೆ ಎಂದರು.

ಇಲ್ಲೂ ಸಹ ಜನ ಬಂದು ಬಂಡವಾಳ ಹಾಕಬೇಕು ಎಂದು ತೀರ್ಮಾನ ಮಾಡಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿ ಮಾಡಬೇಕಿದೆ. ನಮ್ಮ ಸರ್ಕಾರ ರೈತರ ಜೊತೆಗೆ ಇರಲಿದೆ. ಯಾರೂ ಹೆದರಬೇಕಿಲ್ಲ. ನಾನು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ. ಇಲ್ಲಿ ಅರಣ್ಯ ಪ್ರದೇಶದಲ್ಲಿ ಸಮಸ್ಯೆ ಇರುವುದನ್ನು ಪರಿಹರಿಸಲು ಯತ್ನ ಮಾಡಲಾಗುತ್ತದೆ. ಬಗರ್ ಹುಕುಂ ವಿಚಾರದಲ್ಲಿ 25 ವರ್ಷ ಸಾಕು ಎಂಬ ಕುರಿತು ನಾನು ವಿಶೇಷ ಮಸೂದೆ ಮಾಡಲಾಗುವುದು ಎಂದು ತಿಳಿಸಿದರು.

ಅಡಕೆ ರೈತರನ್ನು ಉಳಿಸಲು ಕೇಂದ್ರಕ್ಕೆ ಸಂಸದ ರಾಘವೇಂದ್ರ ಹಾಗೂ ಇತರರನ್ನು ಕರೆದುಕೊಂಡು ಹೋಗುತ್ತೇವೆ. ಕಸ್ತೂರಿ ರಂಗನ್ ವರದಿ ಕುರಿತ ಕೇರಳ ಮಾದರಿ, ವರದಿ ತಿರಸ್ಕಾರ ಮಾಡುವ ಕುರಿತು ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ. ಬಗರ್ ಹುಕುಂ ಕುರಿತು ತಿಂಗಳಿಗೆ ಎರಡು ಸಭೆ ನಡೆಸಿ, ಜನರ ಸಮಸ್ಯೆಯನ್ನು ಅಲಿಸಿ ಎಂದು ಶಾಸಕರುಗಳಿಗೆ ತಿಳಿಸಿದರು.

ರೈತರಿಗೆ ನೋಟಿಸ್ ನೀಡಬೇಡಿ: ಹೊಸ ನೋಟಿಸ್ ನೀಡಬೇಡಿ, ಹೊಸ ಒತ್ತುವರಿ ಮಾಡಲು ಬಿಡಬೇಡಿ ಎಂದು ಅರಣ್ಯ ಸಚಿವರಿಗೆ, ಪಿಸಿಸಿಎಫ್ ಅವರಿಗೆ ಹೇಳಿದರು.

ರೈತರಿಗಾಗಿ ತೇಗ ಸಿರಿ: ರಸ್ತೆ ಪಕ್ಕದ ಜಮೀನುಗಳಿಗೆ ತೇಗದ ಮರಗಳನ್ನು ನೀಡುತ್ತೇವೆ. ಉಚಿತವಾಗಿ ಗಿಡ ನೀಡಲಾಗುತ್ತದೆ. ಮರ ಬೆಳೆಸಿದ ನಂತರ ಶೇ.70 ರಷ್ಟು ರೈತನಿಗೆ, ಶೇ. 30ರಷ್ಟು ಸರ್ಕಾರಕ್ಕೆ. ನಾನು ಜನರ ಪರ ಇರುತ್ತೇನೆ. ನಾನು ಪಿಎಂ ಬಳಿ ಹೋಗುತ್ತೇನೆ. ಮೊದಲು ಜನರು ಉಳಿಯಬೇಕೆಂದರು. ಇಂದು ನಮ್ಮ ಸಭೆಗೆ ಸಂಸದರು, ಶಾಸಕರು ಬಂದಿದ್ದಾರೆ. ನಿಮ್ಮ ಶಿವಕುಮಾರ್ ನಿಮ್ಮ ಜೊತೆ ಇರುತ್ತಾನೆ ಎಂದರು.

ಅರಣ್ಯ ಸಚಿವ ರಾಮಲಿಂಗರೆಡ್ಡಿ ಮಾತನಾಡಿ, ಪ್ರಾಣಿ, ಮನುಷ್ಯ ಸಂಘರ್ಷ, ಮನೆ ನಿರ್ಮಾಣದ ಕುರಿತು ಪ್ರಸ್ತಾಪ ಮಾಡಿದ ಕಾರಣಕ್ಕೆ ನಾನು ಅಧಿವೇಶನ ಮುಗಿದ ನಂತರ ತೀರ್ಥಹಳ್ಳಿಗೆ ಬರುತ್ತೇನೆ. ಕಸ್ತೂರಿ ರಂಗನ್ ವರದಿಯನ್ನು ಹಿಂದೆ 6 ಸಾಲ ತಿರಸ್ಕಾರ ಮಾಡಿದ್ದೇವೆ. ಇದಕ್ಕಾಗಿಯೇ ವಿಶೇಷ ಅಧಿವೇಶನ ಕರೆಯಲಾಗಿದೆ. ವರದಿಯನ್ನು ವೈಜ್ಞಾನಿಕವಾಗಿ ಮಾಡದ ಕಾರಣಕ್ಕೆ ಸಮಸ್ಯೆ ಉಂಟಾಗಿದೆ. ಇದನ್ನು ಸರಿಪಡಿಸುವ ಕೆಲಸ ಮಾಡಬೇಕೆಂದು ನಮ್ಮ ನಿಲುವಾಗಿದೆ. ಶರಾವತಿ ಸಂತ್ರಸ್ತರ ಸಮಸ್ಯೆಯನ್ನು ಸರಿಪಡಿಸಲಾಗುತ್ತದೆ ಎಂದು ಹೇಳಿದರು.

ಮಧು ಬಂಗಾರಪ್ಪ ಮಾತನಾಡಿ, ಪದೇ ಪದೇ ಶಿವಮೊಗ್ಗಕ್ಕೆ ಬನ್ನಿ

3ನೇ ಪುಟಕ್ಕೆ


ಗಣೇಶ ವಿಸರ್ಜನೆ ವೇಳೆ ಟ್ರ್ಯಾಕ್ಟರ್ ಹರಿದು ಇಬ್ಬರು ಬಾಲಕರು ಸಾವು

ಈರಣ್ಣ ವೃತ್ತದಲ್ಲಿ ದುರಂತ; ನಾಲ್ವರಿಗೆ ಗಾಯ

ರಾಯಚೂರು,ಸೆ.19–

ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಟ್ರ್ಯಾಕ್ಟರ್ ನಿಯಂತ್ರಣ ತಪ್ಪಿ ಮೆರವಣಿಗೆಯಲ್ಲಿದ್ದವರ ಮೇಲೆ ಹರಿದ ಪರಿಣಾಮ ಇಬ್ಬರು ಬಾಲಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿರುವ ದಾರುಣ ಘಟನೆ ನಗರದ ಜಹಿರಾಬಾದ್‌ನ ಎಂ. ಈರಣ್ಣ ವೃತ್ತದಲ್ಲಿ ನಡೆದಿದೆ.





ಮೃತರನ್ನು ಸುಚಿತ್ (14) ಹಾಗೂ ಚರಣಕುಮಾರ್ (16) ಎಂದು ಗುರುತಿಸಲಾಗಿದೆ. ಜಹಿರಾಬಾದ್‌ನಿಂದ ನಗರದ ಖಾಸಬಾವಿಗೆ ಗಣೇಶ ವಿಸರ್ಜನೆಗಾಗಿ ಮೆರವಣಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ಸಂಭವಿಸಿದೆ.

ಮೆರವಣಿಗೆಯಲ್ಲಿ ಡ್ಯಾನ್ಸ್ ಮಾಡುತ್ತಿದ್ದ ವೇಳೆ ಟ್ರ್ಯಾಕ್ಟರ್ ಏಕಾಏಕಿ ನಿಯಂತ್ರಣ ತಪ್ಪಿ ಬಾಲಕರ ಮೇಲೆ ಹರಿದಿದೆ ಎನ್ನಲಾಗಿದೆ. ಚಾಲಕ ಬ್ರೇಕ್ ಹಾಕುವ ಬದಲು ಆಕಸ್ಮಿಕವಾಗಿ ಎಕ್ಸಿಲರೇಟರ್ ಒತ್ತಿದ್ದರಿಂದ ಟ್ರ್ಯಾಕ್ಟರ್ ನಿಯಂತ್ರಣ ತಪ್ಪಿದೆ ಎಂಬುದು ಪ್ರಾಥಮಿಕ ಮಾಹಿತಿ ಎಂದು ತಿಳಿದುಬಂದಿದೆ.

ಮತ್ತೊಂದೆಡೆ, ಡ್ಯಾನ್ಸ್ ಮಾಡುವ ವೇಳೆ ಟ್ರ್ಯಾಕ್ಟರ್‌ನೊಂದಿಗೆ ಸಾಹಸ ಪ್ರದರ್ಶನ ಮಾಡಲಾಗುತ್ತಿತ್ತು ಎಂದು ಮೃತರ ಸಂಬಂಧಿಕರು ಹೇಳಿರುವುದಾಗಿ ತಿಳಿದುಬಂದಿದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಘಟನೆಯಲ್ಲಿ ಇಬ್ಬರು ಬಾಲಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ರಾಯಚೂರು ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪಘಾತದ ಸ್ಥಳ ಹಾಗೂ ಟ್ರ್ಯಾಕ್ಟರ್‌ನ ಚಲನವಲನದ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ಘಟನೆ ಸಂಬಂಧ ರಾಯಚೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು,

3ನೇ ಪುಟಕ್ಕೆ

ಡಿಜೆ ಸೌಂಡಿಗೆ ಮಗು ಅಸ್ವಸ್ಥ ಆರೋಪ; ಜಿಲ್ಲಾಧಿಕಾರಿ ನಿವಾಸದ ಬಳಿ ತಡರಾತ್ರಿ ತಂದೆಯಿಂದ ಪ್ರತಿಭಟನೆ

ರಾಯಚೂರು: ಡಿಜೆ ಸೌಂಡಿಗೆ ಮಗು ಅಸ್ವಸ್ಥಗೊಂಡಿದೆ ಎಂದು ಆರೋಪಿಸಿ ಗೋಲ್ ಮಾರ್ಕೆಟ್ ಬಡಾವಣೆಯ ನಿವಾಸಿ ಹಾಗೂ ಬಿಎಸ್ಪಿ ಜಿಲ್ಲಾಧ್ಯಕ್ಷ ಜೈಭೀಮ್ ವಲ್ಲಭ ತನ್ನ ಪುತ್ರಿಯನ್ನು ಎತ್ತಿಕೊಂಡು ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಮುಂಜಾವ ಎರಡು ಗಂಟೆ ಸುಮಾರಿಗೆ ಪ್ರತಿಭಟನೆ ನಡೆಸಿದ ಘಟನೆ ವರದಿಯಾಗಿದೆ.



ರಾತ್ರಿ ವೇಳೆ ಡಿ.ಜೆ ಬ್ಯಾನ್ ಅಂತ ಪೊಲಿಸರು ಆದೇಶಿಸಿದರೂ ಯಾರು ಪಾಲನೆ ಮಾಡುತ್ತಿಲ್ಲ. ಇದರಿಂದ ಚಿಕ್ಕ ಮಕ್ಕಳು, ವಯೋವೃದ್ಧರ ಆರೋಗ್ಯಕ್ಕೆ ಸಮಸ್ಯೆಯಾಗುತ್ತಿದೆ. ಕೂಡಲೇ ಜಿಲ್ಲಾಧಿಕಾರಿ ಸ್ಥಳಕ್ಕೆ ಬರಬೇಕು ಎಂದು ಒತ್ತಾಯಿಸಿದರು. ಈ ವೇಳೆ ಪೊಲೀಸರು ತಡೆದು ಬೆಳಗ್ಗೆ ಮಾತನಾಡುವಂತೆ ಸೂಚಿಸಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಜೈಭೀಮ್ ವಲ್ಲಭ, ನಮ್ಮ ಮಕ್ಕಳ ಆರೋಗ್ಯಕ್ಕಿಂತ ಜಿಲ್ಲಾಧಿಕಾರಿಗೆ ನಿದ್ರೆಯೇ ಮುಖ್ಯವಾಗಿದೆಯೇ? ಹಾಗಾದರೆ ನಾನು ಬೆಳಗ್ಗಿನವರೆಗೆ ಇಲ್ಲಿಯೇ ಕೂರುವೆ ಎಂದು ಪಟ್ಟು ಹಿಡಿದರು.

ಬಳಿಕ ಪೊಲೀಸರು ಮಗುವನ್ನು ಆಸ್ಪತ್ರೆಗೆ ಕರೆದೊಯ್ದು ಬೆಳಗ್ಗೆ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿಸುತ್ತೇವೆ ಎಂದು ಸಮಾಧಾನ ಪಡಿಸಿದರು.

ಜಿಲ್ಲೆಯಲ್ಲಿ ಬರಗಾಲ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಗತ್ಯವೆ -ಅಣ್ಣಪ್ಪ ಮೇಟಿಗೌಡ

ರಾಯಚೂರು, ಸೆ.18:

ಕನ್ನಡ ಸಾಹಿತ್ಯ ಪರಿಷತ್ತಿನ ರಾಯಚೂರು ಜಿಲ್ಲಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ನಾಲ್ಕು ವರ್ಷ ಎಂಟು ತಿಂಗಳ ಕಾಲ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸದೆ, ಅಧಿಕಾರಾವಧಿ ಮುಗಿಯಲು ಇನ್ನೆರಡು ತಿಂಗಳು ಮಾತ್ರ ಬಾಕಿ ಇರುವಾಗ ಸಮ್ಮೇಳನ ನಡೆಸಲು ಮುಂದಾಗಿರುವುದು ಏಕೆ? ಜಿಲ್ಲೆಯಲ್ಲಿ ತೀವ್ರ ಬರಗಾಲವಿದ್ದು ರೈತರು ಸಂಕಷ್ಟದಲ್ಲಿರುವ ಸಂದರ್ಭ ದಲ್ಲಿ ಈಗ ಅದ್ದೂರಿಯಾಗಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸುವ ಅಗತ್ಯವೇನು ಎಂದು ಅಣ್ಣಪ್ಪ ಮೇಟಿಗೌಡ ಪ್ರಶ್ನಿಸಿದ್ದಾರೆ.



ಅವರು ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕಳೆದ ನಾಲ್ಕು ವರ್ಷ ಎಂಟು ತಿಂಗಳಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸುವಂತೆ ಮೂರ್ನಾಲ್ಕು ಬಾರಿ ಒತ್ತಾಯಿಸಿದ್ದೇವೆ. ಸಮ್ಮೇಳನ ನಡೆಸಿದರೆ ತಾವೂ ಕೂಡ ಬೆಂಬಲಿಸುವುದಾಗಿ ತಿಳಿಸಿದ್ದೆವು. ಆದರೆ ಆಗ ನೆನಪಿಗೆ ಬಾರದ ಜಿಲ್ಲಾ ಸಮ್ಮೇಳನ ಈಗ ಅಧಿಕಾರಾ ವಧಿ ಮುಗಿಯುವ ಹಂತದಲ್ಲಿ ಏಕೆ ನೆನಪಾಗಿದೆ ಎಂದು ಪ್ರಶ್ನಿಸಿದ್ದಾರೆ.

ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಹಾಗೂ ಚುನಾವಣಾ ಅಧಿಕಾರಿಗಳ ನೇಮಕವಾಗಿರುವಾಗ ಸಮ್ಮೇಳನ ನಡೆಸಲು ಆತುರ ತೋರುತ್ತಿರುವುದರ ಉದ್ದೇಶವೇನು ಎಂಬುದನ್ನು ಕಸಾಪ ಜಿಲ್ಲಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಜಿಲ್ಲೆಯ ಜನತೆಗೆ ಸ್ಪಷ್ಟಪಡಿಸಬೇಕು. ರಾಜ್ಯ ಘಟಕದಿಂದ ನಿರೀಕ್ಷಿತ ಅನುದಾನವೂ ದೊರೆಯದ ಸಂದರ್ಭದಲ್ಲಿ ಯಾವ ಉದ್ದೇಶಕ್ಕಾಗಿ ಈ ಸಮ್ಮೇಳನ ನಡೆಸಲಾಗುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ಅವರು ಹೇಳಿದ್ದಾರೆ.

ಜನಪ್ರತಿನಿಧಿಗಳು ಹಾಗೂ ದಾನಿಗಳು ಪ್ರಸ್ತುತ ಸಮ್ಮೇಳನಕ್ಕೆ ಬೆಂಬಲ ನೀಡುವ ಮೊದಲು ಜಿಲ್ಲೆಯ ಪರಿಸ್ಥಿತಿಯನ್ನು ಗಮನಿಸಬೇಕು. ತೀವ್ರ ಬರಗಾಲದ ಹಿನ್ನೆಲೆಯಲ್ಲಿ ರೈತರು ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಅದ್ದೂರಿ ಸಾಹಿತ್ಯ ಸಮ್ಮೇಳನ ನಡೆಸುವ ಬದಲು ಬರಗಾಲದ ಪರಿಸ್ಥಿತಿ ಸುಧಾರಿಸಿದ ಬಳಿಕ ಎಲ್ಲರೂ ಸೇರಿಕೊಂಡು ಸಮ್ಮೇಳನ ನಡೆಸುವುದು ಸೂಕ್ತ. ಆಗ ತಾವೂ ಸೇರಿದಂತೆ ಎಲ್ಲರೂ ಸಂಪೂರ್ಣವಾಗಿ ಬೆಂಬಲಿಸುವುದಾಗಿ ತಿಳಿಸಿದ್ದಾರೆ.

ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಭೆ ಕರೆದು ಮೊದಲ ಸಭೆಯಲ್ಲಿಯೇ ಸಮ್ಮೇಳನದ ದಿನಾಂಕ ಪ್ರಕಟಿಸಲಾಗಿದೆ. ಆದರೆ ಆ ಸಭೆಗೆ ತಮ್ಮೊಂದಿಗೆ ಇರುವ ಕೆಲವರನ್ನು ಮಾತ್ರ ಆಹ್ವಾನಿಸಿ ತೀರ್ಮಾನ ಕೈಗೊಳ್ಳಲಾಗಿದೆ ಎಂಬ ಆರೋಪವಿದೆ. ಕೆಲವು ಜಿಲ್ಲಾ ಕಸಾಪ ಪ್ರತಿನಿಧಿಗಳಿಗೂ ಸಮ್ಮೇಳನದ ಕುರಿತು ಮಾಹಿತಿ ಇಲ್ಲ. ತಮ್ಮ ಅಧಿಕಾರಾವಧಿಯಲ್ಲಿ ಸರ್ವಸದಸ್ಯರ ಸಭೆಯನ್ನು ಸಮರ್ಪಕವಾಗಿ ನಡೆಸದೆ ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನವೆಂದರೆ ಕೆಲವೇ ಜನರ ಕಾರ್ಯಕ್ರಮವಾಗಬಾರದು. ಜಿಲ್ಲೆಯ ಎಲ್ಲ ಕನ್ನಡಾಭಿಮಾನಿಗಳು, ಸಾಹಿತಿಗಳು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸುವ ಕನ್ನಡದ ಹಬ್ಬವಾಗಬೇಕು. ಎಲ್ಲರ ಅಭಿಪ್ರಾಯ ಪಡೆದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮ್ಮೇಳನ ನಡೆಸಬೇಕಾಗಿದೆ. ಆದರೆ ತಮಗೆ ಬೇಕಾದವರನ್ನು ಕರೆದು ಸಭೆ ನಡೆಸಿ

3ನೇ ಪುಟಕ್ಕೆ

ಮಹಿಳೆಯನ್ನು ಕೊಲೆಗೈದು ಮೃತ ದೇಹದ ಮೇಲೆ ಮಗುವನ್ನು ಇಟ್ಟು ಹಂತಕರು ಪರಾರಿ

ಸಿಂಧನೂರು :19-09-2026

ಸಿಂಧನೂರಿನ. ಆರ್. ಎಚ್. ಕ್ಯಾಂಪ್ 5ರ. ಗ್ರಾಮದ ಹೊರ ವಲಯದಲ್ಲಿ ಇರುವ ಜಮೀನಿನಲ್ಲಿ. ಮಹಿಳೆ ಯೋರ್ವಳನ್ನು ಕಲ್ಲಿನಿಂದ ಜಜ್ಜಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ನಡೆದಿದೆ. ಆರ್ ಹೆಚ್ ಕ್ಯಾಂಪಿನ. 4.ರ ನಿವಾಸಿ ಸ್ನೇಹಾ(26) ಕೊಲೆಯಾದ ಮಹಿಳೆ ಎಂದು ಗುರುತಿಸಲಾಗಿದೆ. ಕೊಲೆಪಾತಕರು ಕೃತ್ಯ ಎಸಗಿದ ಬಳಿಕ ಮಹಿಳೆಯ ಎರಡು ವರ್ಷದ ಮಗುವನ್ನು ಆಕೆಯ ಮೃತ ದೇಹದ ಮೇಲೆ ಕುಳ್ಳಿರಿಸಿ ಪರಾರಿಯಾಗಿದ್ದಾರೆ.



ನಿರ್ಜನ ಪ್ರದೇಶದಲ್ಲಿ ಮಗುವಿನ ಅಳುವಿನ ಶಬ್ದ ಕೇಳಿ ಸ್ಥಳೀಯರು ಹೋಗಿ ನೋಡಿದಾಗ ಈ ದಾರುಣ ಘಟನೆ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ನೀಡಿ. ಪರಿಶೀಲನೆ ನಡೆಸಿದ್ದಾರೆ. ಕೊಲೆ ಗೆ ನಿಖರವಾದ ಕಾರಣ ಇನ್ನು ತಿಳಿದು ಬಂದಿಲ್ಲ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹಂತಕರ ಪತ್ತೆಗಾಗಿ ತನಿಖೆ ಆರಂಭಿಸಿದ್ದಾರೆಂದು ತಿಳಿದು ಬಂದಿದೆ.

ರಾಯಚೂರು ಜಿಪಂ ಸ್ವಚ್ಛ ಭಾರತ ಮಿಷನ್ ನಡಿ ನಿರ್ಮಿಸಿದ ಶೌಚಾಲಯ, ಬಳಕೆಯ ವರದಿ ನೀಡಲು ಸೂಚನೆ

ರಾಯಚೂರು:

ಸ್ವಚ್ಛ ಭಾರತ ಮಿಷನ್ ನಲ್ಲಿ ಭ್ರಷ್ಟಾಚಾರ, ಅವ್ಯವಹಾರ ನಡೆದ ದೂರಿಗೆ ಸಂಬಂಧಿಸಿದಂತೆ ಶುಕ್ರವಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ ಕಾಂದೂ ಪಿಡಿಓಗಳ ಸಭೆ ಕರೆದು ಶೌಚಾಲಯಗಳ ಸ್ಥಿತಿಗತಿ, ಅವುಗಳ ಬಳಕೆ ಹಾಗೂ ನಿರುಪಯುಕ್ತವಾಗಿರುವ ಶೌಚಾಲಯಗಳ ಕುರಿತು ಸಮರ್ಪಕವಾಗಿ ಸಮೀಕ್ಷೆ ನಡೆಸಿ ನಿಖರ ಮಾಹಿತಿಯೊಂದಿಗೆ ಪಟ್ಟಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸ್ವಚ್ಛ ಭಾರತ ಮಿಷನ್ ನಲ್ಲಿ ನಡೆದ ಭ್ರಷ್ಟಾಚಾರ ಆರೋಪದ ಕುರಿತು 'ವಾರ್ತಾಭಾರತಿ' ಪತ್ರಿಕೆಯಲ್ಲಿ ಸೆ.16ರಂದು ಸ್ವಚ್ಛ ಭಾರತ ಮಿಷನ್ ನಲ್ಲಿ ಭಾರಿ ಅವ್ಯವಹಾರ' ಅಶ್ವಿನಿ ಕೊಲೆ ಪ್ರಕರಣದಿಂದ ಬಯಲಾದ ವಾಸ್ತವ; ವರದಿ ನೀಡಲು ಜಿಪಂಗೆ ಸೂಚನೆ' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ವರದಿ ಬಳಿಕ ಜಿಪಂ ಸಿಇಒ ಸಭಾಂಗಣದಲ್ಲಿ ಜಿಲ್ಲೆಯ ಪಿಡಿಓಗಳ ಹಾಗೂ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ಮಾಡಿ ಸ್ಥಳೀಯ ಮಟ್ಟದ ವರದಿ ಸಲ್ಲಿಸಲು ಸೂಚನೆ ನೀಡಿದ್ದಾರೆ.



ಜಿಲ್ಲೆಯಲ್ಲಿ ಸ್ವಚ್ಛ ಭಾರತ ಯೋಜನೆಯಡಿ ನಿರ್ಮಿಸಿರುವ ಶೌಚಾಲಯಗಳನ್ನು ಕುಟುಂಬಗಳು ಸಮರ್ಪಕವಾಗಿ ಬಳಕೆ ಮಾಡುತ್ತಿವೆಯೇ, ನಿರುಪಯುಕ್ತವಾಗಿವೆಯೇ ಎಂಬುದರ ಕುರಿತು ಮಾಹಿತಿ ಸಂಗ್ರಹಿಸಬೇಕು. ಇತ್ತೀಚೆಗೆ ಮಾನವಿ ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಬಯಲು ಶೌಚಕ್ಕೆ ತೆರಳಿದ್ದ ಮಹಿಳೆ ಮೃತಪಟ್ಟಿರುವ ಘಟನೆ ಎಲ್ಲೆಡೆ ಸುದ್ದಿಯಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಶೌಚಾಲಯಗಳ ವಾಸ್ತವ ಸ್ಥಿತಿಗತಿ ಹಾಗೂ ಅವುಗಳ ಬಳಕೆಯ ಕುರಿತು ನಿಖರ ಮಾಹಿತಿ ಪಡೆಯುವುದು ಅಗತ್ಯವಾಗಿದೆ ಎಂದು ಹೇಳಿದರು.

ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ, ಎಷ್ಟು ಕುಟುಂಬಗಳು ಅವುಗಳನ್ನು ಬಳಕೆ ಮಾಡುತ್ತಿವೆ, ನಿರ್ಮಾಣಗೊಂಡಿದ್ದರೂ ಬಳಕೆ ಮಾಡದಿರುವ ಶೌಚಾಲಯಗಳ ಸಂಖ್ಯೆ ಎಷ್ಟು, ಬಳಕೆ ಮಾಡದಿರುವುದಕ್ಕೆ ಕಾರಣವೇನು, ಶೌಚಾಲಯದ

3ನೇ ಪುಟಕ್ಕೆ

ಗಿಲ್ಲೆಸುಗೂರಿನಲ್ಲಿ ಪ್ರಜಾ ಸೇವೆ ಜನರ ಬಳಿಗೆ ಆಡಳಿತ, ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ- ಗ್ರಾಮೀಣ ಶಾಸಕ ಬಸನಗೌಡ ದದ್ದಲ್

ರಾಯಚೂರು,ಸೆ.19–

ಇಂದು ಗಿಲ್ಲೆಸುಗೂರು ಗ್ರಾಮದಲ್ಲಿ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ''ಪ್ರಜಾ ಸೇವೆ'' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.



ಗಿಲ್ಲೆಸುಗೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ವಿವಿಧ ಸಮಸ್ಯೆಗಳು ಹಾಗೂ ಅಹವಾಲುಗಳನ್ನು ಅಧಿಕಾರಿಗಳ ಮುಂದೆ ನೇರವಾಗಿ ಸಲ್ಲಿಸಿದರು. ಕಂದಾಯ, ಗ್ರಾಮೀಣಾಭಿವೃದ್ಧಿ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸ್ಥಳದಲ್ಲೇ ಉಪಸ್ಥಿತರಿದ್ದು, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಸಾಧ್ಯವಾದಷ್ಟು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಬಾಕಿ ಇರುವ ಅರ್ಜಿಗಳು ಹಾಗೂ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸರ್ಕಾರಿ ಕಚೇರಿಗಳಿಗೆ ಜನರು ಪದೇ ಪದೇ ಅಲೆದಾಡುವ ಪರಿಸ್ಥಿತಿ ತಪ್ಪಿಸಿ, ಅಧಿಕಾರಿಗಳನ್ನೇ ಜನರ ಬಳಿಗೆ ಕರೆತಂದು, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಪ್ರಜಾ ಸೇವೆಯ ಉದ್ದೇಶವಾಗಿದೆ.

ಜನರ ಸಮಸ್ಯೆಗಳನ್ನು ಕೇವಲ ಆಲಿಸುವುದಷ್ಟೇ ಅಲ್ಲದೆ, ಅವುಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸುವ

3ನೇ ಪುಟಕ್ಕೆ

ಸ್ಪರ್ಧಾತ್ಮಕ ಯುಗಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದು ಶಿಕ್ಷಕರ ಹೊಣೆ

ಔರಾದ್,ಸೆ.18-

ಶಿಕ್ಷಕರ ದಿನಾಚರಣೆಯ ಅಂಗವಾಗಿ ಔರಾದ(ಬಿ) ಶಾಸಕರು ಹಾಗೂ ಮಾಜಿ ಸಚಿವರಾದ ಪ್ರಭು ಬಿ. ಚವ್ಹಾಣ ಅವರು ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ-ಕಾಲೇಜು ಗಳು, ಐಟಿಐ ಹಾಗೂ ಡಿಪ್ಲೋಮಾ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಸುಮಾರು 3.5 ಸಾವಿರ ಶಿಕ್ಷಕರನ್ನು ಸೆ.18ರಂದು ಪಟ್ಟಣದ ಡಾ. ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಶಾಲು ಹೊದಿಸಿ, ಹೂಹಾರ ಹಾಕಿ, ಉಡು ಗೊರೆ ನೀಡಿ ಆತ್ಮೀಯವಾಗಿ ಗೌರವಿಸಿ ದರು.

ವಿಭಾಗವಾರು ಶಿಕ್ಷಕರು ವೇದಿಕೆಗೆ ಆಗಮಿಸಿ ಶಾಸಕರಿಂದ ಸನ್ಮಾನ ಸ್ವೀಕರಿಸಿ ಸಂತೋಷಪಟ್ಟರು. ಶಿಕ್ಷಕರ ಸೇವೆಯನ್ನು ಸ್ಮರಿಸಿ, ದೊಡ್ಡ ಸಂಖ್ಯೆಯ ಶಿಕ್ಷಕರನ್ನು ಒಂದೇ ವೇದಿಕೆಯಲ್ಲಿ ಸನ್ಮಾನಿಸಿರುವುದು ಕಾರ್ಯಕ್ರಮದ ಪ್ರಮುಖ ವಿಶೇಷತೆಯಾಗಿತ್ತು.

ಈ ವೇಳೆ ಮಾತನಾಡಿದ ಶಾಸಕ ಪ್ರಭು ಬಿ.ಚವ್ಹಾಣ ಅವರು, ಶಿಕ್ಷಕ ರು ಸಮಾಜದ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳಾಗಿದ್ದು, ಅವರ ಸೇವೆಗೆ ಗೌರವ ಸಲ್ಲಿಸುವ ಉದ್ದೇಶದಿಂದ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಎಲ್ಲ ವರ್ಗದ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸಲಾಗಿದೆ. ಸರ್ಕಾರಿ ಶಾಲೆಗಳ ಶಿಕ್ಷಕರ ಜೊತೆಗೆ ಅನುದಾನಿತ, ಅನುದಾನ ರಹಿತ ಶಾಲಾ-ಕಾಲೇ ಜುಗಳು, ಐಟಿಐ ಮತ್ತು ಡಿಪ್ಲೋಮಾ ಸಂಸ್ಥೆಗಳ ಶಿಕ್ಷಕರೂ ಸೇರಿದಂತೆ ಎಲ್ಲ ಶಿಕ್ಷಕರನ್ನು ಗೌರವಿಸಿರುವುದು ಶಿಕ್ಷಕರ ಮೇಲಿನ ಗೌರವದ ಪ್ರತೀಕವಾಗಿದೆ ಎಂದರು.

ಎಲ್ಲ ರಂಗಗಳ ಅಭಿವೃದ್ಧಿಗೆ ಶಿಕ್ಷಣವೇ ಬುನಾದಿಯಾಗಿದೆ. ಶಿಕ್ಷಣ ವಿಲ್ಲದೆ ಸಮಾಜದ ಪ್ರಗತಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಶಿಕ್ಷಣ ಕ್ಷೇತ್ರದ ಅಭಿವೃ ದ್ಧಿಗೆ ಏನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ಇದಕ್ಕೆ ಶಿಕ್ಷಕರೆಲ್ಲ ಕೈಜೋಡಿಸಬೇಕು. ಇನ್ನಷ್ಟು ಶ್ರದ್ದೆಯಿಂದ ಕೆಲಸ ಮಾಡಬೇಕು. ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಫಲಿತಾಂಶ ಶೇ.100ರಷ್ಟು ತರಲು ಯತ್ನಿಸಬೇಕು ಎಂದು ಹೇಳಿದರು.

ತಾವು ಕೇವಲ ಭಾಷಣ ಮಾಡು ವುದಕ್ಕೆ ಸೀಮಿತವಾಗಿಲ್ಲ. ವಿದ್ಯಾರ್ಥಿ ಗಳು ಮತ್ತು ಶಿಕ್ಷಕರಿಗೆ ಅನುಕೂ ಲವಾಗುವಂತೆ ಪ್ರಾಯೋಗಿಕವಾಗಿ ಕೆಲಸ ಮಾಡುತ್ತಿದ್ದೇನೆ. ವಿದ್ಯಾರ್ಥಿ ಗಳಿಗೆ ಶೈಕ್ಷಣಿಕವಾಗಿ ಅನುಕೂಲವಾ ಗಬೇಕು ಎಂಬ ಉದ್ದೇಶದಿಂದ ತಮ್ಮ ಜನ್ಮದಿನದ ಸಂದರ್ಭದಲ್ಲಿ ಕ್ಷೇತ್ರದ ಎಲ್ಲ ಶಾಲಾ-ಕಾಲೇಜುಗಳ ವಿದ್ಯಾ ರ್ಥಿಗಳಿಗೆ ನೋಟ್‌ಬುಕ್‌ಗಳನ್ನು ವಿತರಿಸಲಾಗಿದೆ. ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸು ವುದು, ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾ ಹಿಸುವುದು ಹಾಗೂ ಶಿಕ್ಷಕರಿಗೆ ಅಗತ್ಯ



ಸಹಕಾರ ನೀಡುವುದು ತಮ್ಮ ಆದ್ಯತೆಯಾಗಿದೆ ಎಂದು ಹೇಳಿದರು.

ಶಾಸಕನಾದ ನಂತರ ಕ್ಷೇತ್ರದ ಗ್ರಾಮಗಳಿಗೆ ಭೇಟಿ ನೀಡಿ ಶಾಲಾ-ಕಾಲೇಜುಗಳ ಸ್ಥಿತಿಗತಿಯನ್ನು ಖುದ್ದಾಗಿ ಅರಿತುಕೊಂಡು, ಅಗತ್ಯಕ್ಕೆ ಅನುಗುಣವಾಗಿ ಅನುದಾನ ಒದಗಿಸಿ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿ ಸಲಾಗಿದೆ. ವಸತಿ ಶಾಲೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ವಸತಿ ನಿಲಯಗಳನ್ನು ನಿರ್ಮಿಸಲಾ ಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿ ಗಳನ್ನು ನಿರಂತರವಾಗಿ ಸನ್ಮಾನಿಸಿ ಪ್ರೋತ್ಸಾ ಹಿಸುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದ್ದು, ವಿದ್ಯಾರ್ಥಿಗಳ ಫಲಿತಾಂಶದಲ್ಲಿಯೂ ಇದರ ಪರಿಣಾಮ ಕಾಣಿಸುತ್ತಿದೆ ಎಂದರು.

ಇಂದಿನದು ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನ ಆಧಾರಿತ ಯುಗವಾ ಗಿದೆ. ಕಾಲಕ್ಕೆ ತಕ್ಕಂತೆ ಶಿಕ್ಷಣ ವ್ಯವಸ್ಥೆ ಯಲ್ಲಿಯೂ ಬದಲಾವಣೆ ಅಗತ್ಯ ವಿದೆ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಶಿಕ್ಷಣದ ಜೊತೆಗೆ ತಾಂತ್ರಿಕ ಜ್ಞಾನ, ಡಿಜಿಟಲ್ ಕೌಶಲ್ಯ ಹಾಗೂ ಸ್ಪರ್ಧಾ ತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಮಾರ್ಗದರ್ಶನ ನೀಡಬೇಕು. ನಮ್ಮ ಕ್ಷೇತ್ರದ ಮಕ್ಕಳು ಕೂಡ ಭವಿಷ್ಯದಲ್ಲಿ ಐಎಎಸ್, ಐಪಿಎಸ್, ವೈದ್ಯರು, ಇಂಜಿನಿಯರ್‌ಗಳು ಸೇರಿದಂತೆ ಉನ್ನತ ಹುದ್ದೆಗಳಿಗೆ ಏರುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಪ್ರಭು ಬಿ. ಚವ್ಹಾಣ ಹೇಳಿ ದರು.

ಶಿಕ್ಷಕರಿಗೆ ಜಗತ್ತಿನಲ್ಲಿಯೇ ಅತ್ಯಂತ ಗೌರವದ ಸ್ಥಾನಮಾನ ನೀಡಲಾಗಿದೆ. ಸಮಾಜ ಶಿಕ್ಷಕರನ್ನು ಗೌರವದಿಂದ ಕಾಣುವಂತೆಯೇ ಶಿಕ್ಷಕರು ಕೂಡ ತಮ್ಮ ಜವಾಬ್ದಾರಿ ಯನ್ನು ಅರಿತು ಕರ್ತವ್ಯ ನಿರ್ವಹಿಸ ಬೇಕು. ಶಿಕ್ಷಕರ ನಡೆ-ನುಡಿ, ಶಿಸ್ತು, ಜ್ಞಾನ ಹಾಗೂ ಸೇವಾ ಮನೋ ಭಾವವನ್ನು ಕಂಡು ಮಕ್ಕಳು ಅವರನ್ನು ತಮ್ಮ ರೋಲ್ ಮಾಡಲ್ ಆಗಿ ಪರಿಗಣಿಸುವಂತಿರಬೇಕು ಎಂದು ಸಲಹೆ ನೀಡಿದರು. ಅಲ್ಲದೇ ಔರಾ ದ(ಬಿ) ಕ್ಷೇತ್ರದ ಶಿಕ್ಷಕರ ಬಹು ದಿನಗಳ ಬೇಡಿಕೆಯಾದ ಗುರುಭವನ ನಿರ್ಮಾಣಕ್ಕೆ ಈಗಾಗಲೇ 50 ಲಕ್ಷ ಅನುದಾನ ಮಂಜೂರು ಮಾಡಿಸಿ ದ್ದೇನೆ. ಶೀಘ್ರ ಆರಂಭಿಸಲಾಗು ವುದು. ಶಿಕ್ಷಕರ ಎಲ್ಲ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗು ವುದೆಂದು ತಿಳಿಸಿದರು.

ಈ ವೇಳೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಗುರುಬಸವ ಪಟ್ಟದೇವರು ಮಾತನಾಡಿ, ಶಿಕ್ಷಣದ ಕ್ಷೇತ್ರದ ಅಭಿವೃದ್ಧಿಯಿಂದ ಎಲ್ಲ ರಂಗಗಳಲ್ಲಿ ಬೆಳವಣಿಗೆ ಸಾಧಿಸ ಬಹುದೆಂದು ಅರಿತಿರುವ ಶಾಸಕ ಪ್ರಭು ಚವ್ಹಾಣ ಅವರು ಮಾಡು ತ್ತಿರುವ ಶಿಕ್ಷಕರು ಮತ್ತು ವಿದ್ಯಾ ರ್ಥಿಗಳಿಗೆ ಸನ್ಮಾನ, ನೋಟ್‌ಬುಕ್ ವಿತರಣೆಯಂತಹ ಕಾರ್ಯಕ್ರಮ ಗಳು ಮಾದರಿ ಮತ್ತು ಅನುಕರ ಣೀಯ ಎಂದು ಹೇಳಿದರು. ವಿಧಾನಪರಿಷತ್ ಸದಸ್ಯರಾದ ಶಶೀಲ್ ಜಿ.ನಮೋಶಿ ಅವರು ಮಾತನಾಡಿ, ಶಿಕ್ಷಕರ ಅಭಿವೃದ್ಧಿಗೆ ನಿರಂತರ ಪ್ರಯತ್ನಿಸುತ್ತಿದ್ದು, ಎಲ್ಲ ಬೇಡಿಕೆಗಳನ್ನು ಈಡೇರಿಸಲು ನಿರಂತರ ಪ್ರಯತ್ನಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾ ರರಾದ ಮಹೇಶ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ರವಿ ಸುಕುಮಾರ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ರಾಠೋಡ, ಇಸಿಓ ಹಾಗೂ ನೋಡಲ್ ಅಧಿಕಾರಿ ಸಂಜಯ ಮೇತ್ರೆ, ದೈಹಿಕ ಶಿಕ್ಷಣ ಪರಿವೀಕ್ಷಕ ಸಿದ್ದಾರೆಡ್ಡಿ, ಪ್ರಮುಖರಾದ ಧೊಂ ಡಿಬಾ ನರೋಟೆ, ಶಿವಾಜಿ ಪಾಟೀಲ ಮುಂಗನಾಳ, ಸಂತೋಷಕುಮಾರ ಪೂಜಾರಿ, ಲಕ್ಷ್ಮಣ ತುರೆ, ನರೇಂದ್ರ, ಪಂಢರಿ ಆಡೆ, ವಿಶ್ವನಾಥ ಬಿರಾದಾರ, ರವೀಂದ್ರರೆಡ್ಡಿ ಮಾಲಿ ಪಾಟೀಲ, ಮೆಹಬೂಬ್ ಪಟೇಲ್, ಪ್ರಭು ಲಿಂಗ ತುಗಾವೆ, ರಾಮಶೆಟ್ಟಿ ಕೆಂಚಾ, ಗಜಾನನ್ ಮಳ್ಳಾ, ಗುರುನಾಥ ದೇಶಮುಖ, ವಿಜಯಕುಮಾರ ನುದನೂರೆ, ಮಹಾದೇವ ಚಿಟಗೇರೆ, ಸೂರ್ಯಕಾಂತ ಬಿರಾದಾರ, ಗುರುನಾಥ ರೆಡ್ಡಿ, ಮಹಾದೇವ ಘೂಳೆ, ರಾಜಕುಮಾರ ಡೊಂಗ್ರೆ, ಪ್ರಶಾಂತ ಮಠಪತಿ, ಸಂಜೀವ ಶೆಟಕಾರ, ಕೃಷ್ಣಾ ಪಾಟೀಲ, ಎಂ.ಡಿ ನಯೀಮ್, ವಿಲಾಸ ಮೇತ್ರೆ, ಬಾಲಾಜಿ ಅಮರವಾಡಿ, ಉಮಾ ಕಾಂತ ಮಹಾಗಾಂವ, ಬಸವರಾಜ ಶೆಟಕಾರ, ರವಿ ಡೋಳೆ, ಸಂತೋಷ ರೆಡ್ಡಿ ಸೇರಿದಂತೆ ವಿವಿಧ ಶಾಲಾ ಕಾಲೇಜುಗಳ ಶಿಕ್ಷಕರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿ ತರಿದ್ದರು.

ಭವ್ಯ ಮೆರವಣಿಗೆ: ಕಾರ್ಯ ಕ್ರಮಕ್ಕೂ ಮುನ್ನ ಪಟ್ಟಣದಲ್ಲಿ ಮಾಜಿ ರಾಷ್ಟ್ರಪತಿ, ಖ್ಯಾತ ಶಿಕ್ಷಣ ತಜ್ಞರಾದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆ ಬಸವೇಶ್ವರ ವೃತ್ತದಲ್ಲಿ ಆರಂಭಗೊಂಡು ಬಸ್ ನಿಲ್ದಾಣ, ಎಪಿಎಂಸಿ ವೃತ್ತ, ಡಾ.ಚನ್ನ ಬಸವ ಪಟ್ಟದೇವರು ವೃತ್ತದ ಮಾರ್ಗ ವಾಗಿ ಕಾರ್ಯಕ್ರಮದ ಸ್ಥಳಕ್ಕೆ ಬಂದು ಕೊನೆಗೊಂಡಿತು. ಮೆರವಣಿಗೆ ಯುದ್ದಕ್ಕೂ ಶಿಕ್ಷಕರು ಕನ್ನಡ ಹಾಡು ಗಳಿಗೆ ಕುಣಿದು ಕುಪ್ಪಳಿಸಿದರು. ಶಿಕ್ಷಕರ ಮೇಲೆ ಹೂಮಳೆ ಸುರಿಸಿ ಗೌರವಿಸಲಾಯಿತು.

ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ಸ್ವಂತ ಕಟ್ಟಡಕ್ಕೆ ಮನವಿ



ಕಲಬುರಗಿ.ಸೆ.18-

ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ಸ್ವಂತ ನಿವೇಶನ ಹಾಗೂ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ ಅವರು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುರುವಾರ ಕಲಬುರಗಿಯಲ್ಲಿ ಜರುಗಿದ ಕಲ್ಯಾಣ ಕರ್ನಾಟಕ ಉತ್ಸ ವದ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ಅವರು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದಾಗ ತಕ್ಷಣ ಮನವಿ ಮೇಲೆ ರುಜು ಮಾಡಿ ನಿವೇಶನ ಮಂಜೂರಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ವಹಿಸಲು ಮುಖ್ಯ ಕಾರ್ಯದರ್ಶಿ ಹಾಗೂ ಕಲಬುರಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಕಳೆದ ಎರಡು ವರ್ಷದಿಂದ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠ ಪ್ರಸ್ತುತ ಲೋಕೋಪಯೋಗಿ ಇಲಾಖೆಗೆ ಸೇರಿದ ಹಳೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಲ್ಲದೆ ಪ್ರಸ್ತುತ ಪೀಠ ನಡೆಯುತ್ತಿರುವ ನ್ಯಾಯಾಲಯ ನಡೆಸಲು ಸೂಕ್ತವಾದ ಪ್ರದೇಶದವಲ್ಲವಾದ್ದರಿಂದ ಪೀಠಕ್ಕೆ ಖಾಯಂ ಕಟ್ಟಡ ಅವಶ್ಯಕತೆ ಇದೆ ಎಂದು ಮುಖ್ಯ ಮಂತ್ರಿಯವರಿಗೆ ಆಯುಕ್ತರು ಮನವರಿಕೆ ಮಾಡಿದರು.

ಇದೇ ವೇಳೆಯಲ್ಲಿ ಮುಖ್ಯ ಮಂತ್ರಿ ಜೊತೆ ಇದ್ದ ಗೃಹ ಹಾಗೂ ಐ.ಟಿ.ಬಿ.ಟಿ. ಖಾತೆ ಸಚಿವ ಪ್ರಿಯಾಂಕ ಖರ್ಗೆ ಸಹ ಬೆಂಬಲ ವ್ಯಕ್ತ ಪಡಿಸಿ, ಆಯೋಗದ ಕಲಬುರಗಿ ಪೀಠಕ್ಕೆ ಸೂಕ್ತ ನಿವೇಶನ ಕೊಡಿಸಲು ಅಗತ್ಯ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಪೋಷಣ್ ಮಾಸಾಚರಣೆ ಗರ್ಭಿಣಿ ಮಹಿಳೆಯರಿಗೆ ಸೀಮಂತ

ಪೌಷ್ಠಿಕ ಆಹಾರದಿಂದ ಆರೋಗ್ಯವಂತ ಸಮಾಜ ನಿರ್ಮಾಣ : ಡಿಸಿ

ಬಾಗಲಕೋಟೆ ,ಸೆ.18-

ಪೌಷ್ಠಿಕ ಆಹಾರವು ತಾಯಿ ಮತ್ತು ಮಗುವಿನ ಉತ್ತಮ ಆರೋಗ್ಯ ಹಾಗೂ ಮಕ್ಕಳ ಸಮಗ್ರ ಬೆಳವಣಿಗೆಗೆ ಪ್ರಮುಖ ಆಧಾರವಾಗಿದ್ದು, ಪೌಷ್ಠಿಕ ಆಹಾರದಿಂದ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯವೆಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.



ನವನಗರದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಿಶು ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ಹಮ್ಮಿಕೊಂಡ ಪೋಷಣ್ ಮಾಸಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಆರೋಗ್ಯಕರ ಸದೃಢ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಪೌಷ್ಠಿಕ ಆಹಾರದ ಮಹತ್ವ ಅರಿತು ಅನುಸರಿಸಬೇಕು ಎಂದರು.

ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಪೌಷ್ಠಿಕ ಆಹಾರ ಮುಖ್ಯವಾಗಿದ್ದು, ಗರ್ಭಾವಸ್ಥೆಯಿಂದಲೇ ತಾಯಂದಿರು ಸಮತೋಲಿತ ಆಹಾರ ಸೇವಿಸುವುದು ಅಗತ್ಯವಾಗಿದೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅಗತ್ಯವಾದ ಪೌಷ್ಠಿಕಾಂಶಗಳನ್ನು ಒದಗಿಸುವಲ್ಲಿ ಕುಟುಂಬದೊಂದಿಗೆ ಅಂಗನವಾಡಿ ಮತ್ತು ಆರೋಗ್ಯ ಇಲಾಖೆಗಳ ಪಾತ್ರವೂ ಮಹತ್ವದ್ದಾಗಿದೆ. ಪೌಷ್ಠಿಕ ಆಹಾರ, ಆರೋಗ್ಯ, ಸ್ವಚ್ಛತೆ ಹಾಗೂ ಮಕ್ಕಳ ಸಮಗ್ರ ಬೆಳವಣಿಗೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ ಪ್ರಾಸ್ತಾವಿಕವಾಗಿ ಮಾತ ನಾಡಿ 0 ದಿಂದ 6 ವರ್ಷದ ಮಕ್ಕಳಲ್ಲಿ ಗರ್ಭಿಣಿಯರು, ಬಾಣಂತಿಯರು ಮತ್ತು ಕಿಶೋರಿಯರಲ್ಲಿ ಅಪೌಷ್ಠಿ ಕತೆ, ಕುಂಠಿತ ಬೆಳೆವಣಿಗೆ ರಕ್ತ ಹೀನತೆ ಹಾಗೂ ಕಡಿಮೆ ತೂಕದ ಮಕ್ಕಳ ಜನನ ಕಡಿಮೆಗೊಳಿಸುವ ಉದ್ದೇಶ ಈ ಪೊಷಣ್ ಮಾಸಾಚರಣೆ ಯದ್ದಾಗಿದೆ. ಪ್ರತಿ ವರ್ಷ ಸೆಪ್ಟೆಂಬರ ಮಾಹೆಯಲ್ಲಿ ಪ್ರಮುಖ 5 ಆದ್ಯತೆ ಗಳೊಂದಿಗೆ ಆಚರಿಸಲ್ಪಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಗರ್ಭಿಣಿ ಮಹಿಳೆಯರಿಗೆ ಸೀಮಂತ ಕಾರ್ಯಕ್ರಮ ನೆರವೇರಿಸಲಾಯಿತು. ಅಲ್ಲದೇ ಶಿಶುಗಳಿಗೆ ಅನ್ನಪ್ರಾಶನ ಕಾರ್ಯಕ್ರಮ ನಡೆಸಿ, ಮಕ್ಕಳ ಆರೋಗ್ಯಕರ ಬೆಳೆವಣಿಗೆಗೆ ಪೌಷ್ಠಿಕ ಆಹಾರದ ಮಹತ್ವವನ್ನು ತಿಳಿಸಲಾಯಿತು. ಮಕ್ಕಳ ಹುಟ್ಟು ಹಬ್ಬ ಕಾರ್ಯಕ್ರಮವು ಸಹ ನಡೆಸಲಾಯಿತು. ಪೌಷ್ಠಿಕ ಆಹಾರ ಕುರಿತು ಡಾ.ರಮೀತ ಬಿ.ಈ, ಮಹಿಳೆ, ಮಕ್ಕಳ ದೈಹಿಕ, ಮಾನಸಿಕ ಆರೋಗ್ಯ ಕುರಿತು ನಾಗವೇಣಿ ನಾಯಕ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ. ಎಸ್. ವಸ್ತದ, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ತಾ.ಪಂ ಇಒ ಸುಭಾಷ ಸಂಪಗಾವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಭಿವೃದ್ದಿ ಯೋಜನಾಧಿಕಾರಿ ರಮೇಶ ಸೂಳಿಕೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನವ ಮತದಾರರ ನೋಂದಣಿಗೆ ಜಾಗೃತಿ

ಪೋಷಣ್ ಮಾಸಾಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಸೆಪ್ಟೆಂಬರ 19 ಮತ್ತು 20 ರಂದು ಹಮ್ಮಿಕೊಂಡ ನವ ಮತದಾರರ ವಿಶೇಷ ನೋಂದಣಿ ಅಭಿಯಾನದ ಕುರಿತು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ವ್ಯಾಪ್ತಿಯಲ್ಲಿ 18 ವರ್ಷ ಪೂರೈಸುವ ನವ ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಲು ಅರಿವು ಮೂಡಿಸಿ, ನೋಂದಣಿ ಪ್ರಕ್ರಿಯೆ ಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳು ವಂತೆ ಮಾಡಬೇಕು.

-ಪಿ.ಎಸ್.ವಸ್ತ್ರದ, ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ

ಐತಿಹಾಸಿಕ ಸ್ಮಾರಕಗಳ ಸೌಂದರ್ಯಕ್ಕೆ

ವಿಶ್ವಕರ್ಮ ಸಮುದಾಯದ ಕೊಡುಗೆ ಅನನ್ಯ

ಕಲಬುರಗಿ,ಸೆ.18-

ಕರ್ನಾಟಕದ ಐತಿಹಾಸಿಕ ತಾಣಗಳಾದ ಹಂಪಿ, ಪಟ್ಟದಕಲ್ಲು, ಐಹೊಳೆ ಮುಂತಾದವುಗಳ ಸೌಂದ ರ್ಯಕ್ಕೆ ವಿಶ್ವಕರ್ಮ ಸಮುದಾಯದ ಕಲಾತ್ಮಕ ಕೊಡುಗೆಯೇ ಕಾರಣ ಎಂದು ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಂ ಪ್ರಭು ಪಾಟೀಲ ಅವರು ಶ್ಲಾಘೀಸಿದರು.



ಗುರುವಾರ, ನಗರದ ಡಾ. ಎಸ್.ಎಮ್.ಪಂಡಿತ್ ರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾ ನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿ ಸಲಾದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತ ನಾಡಿದರು. ತಮ್ಮ ವಿಶಿಷ್ಟ ವಾಸ್ತು ಶಿಲ್ಪ ಮತ್ತು ಕಲಾತ್ಮಕ ಮೂರ್ತಿ ಗಳನ್ನು ಕೆತ್ತಿ ಜೀವ ತುಂಬುವ ಮೂಲಕ ಜಗತ್ತಿಗೆ ಭಾರತೀಯ ಸಂಸ್ಕೃತಿ ಮತ್ತು ಸೌಂದರ್ಯದ ಪರಿಚಯ ಮಾಡಿ ಕೊಟ್ಟ ಹೆಗ್ಗಳಿಕೆ ಸಲ್ಲುತ್ತದೆ ಎಂದು ತಿಳಿಸಿದರು.

ವಿಶ್ವಕರ್ಮ ಜಯಂತಿಯ ಶುಭಾಶಯ ಕೋರಿದ ಅವರು, ಸಮುದಾಯದ ಕಟ್ಟಡ ನಿರ್ಮಾಣಕ್ಕೆ ತಮ್ಮ ನಿಧಿಯಿಂದ 25 ಲಕ್ಷ ರೂ. ನೀಡುವ ಭರವಸೆ ನೀಡಿದರು. ಜೊತೆಗೆ, ಇತರ ಶಾಸಕರು ಹಾಗೂ ಸಂಸದರಿಂದಲೂ ಅನುದಾನ ಒಟ್ಟುಗೂಡಿಸಿ ಒಟ್ಟು 50 ಲಕ್ಷ ರೂ.ಗಳಷ್ಟು ನಿಧಿಯನ್ನು ಕಟ್ಟಡ ಕಾಮಗಾರಿಗೆ ಒದಗಿಸಿಕೊಡುವು ದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ್ ಅವರು ಮಾತನಾಡಿ ವಿಶ್ವಕರ್ಮ ಸಮುದಾಯವು ತಮ್ಮ ಪಂಚ ಕುಲಕಸುಬುಗಳ ಮೂಲಕ ರೈತರ ಜೀವನಕ್ಕೆ ಆಸರೆಯಾಗು ವುದರ ಜೊತೆಗೆ, ಸುಂದರ ಮೂರ್ತಿ ಹಾಗೂ ಆಭರಣಗಳನ್ನು ನಿರ್ಮಿಸಿ ದೇಶದ ಆರ್ಥಿಕತೆಗೆ ಮಹತ್ತರ ಕೊಡುಗೆ ನೀಡಿದೆ ಎಂದು ಹೇಳಿದರು. ಈ ಸಮುದಾಯದ ಸರ್ವಾಂ ಗೀಣ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರ ನೀಡಲಾ ಗುವುದು ಎಂದು ಶಾಸಕರು ಭರವಸೆ ನೀಡಿದರು. ಮುಂದೆ ಜಿಲ್ಲೆಯಾ ದ್ಯಂತ ವಿಶ್ವಕ ರ್ಮ ಸಮುದಾಯದ ಶ್ರೇಯೋ ಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದರು. ಕಲಬುರಗಿ ಸರ್ಕಾರಿ ಮಹಾ ವಿದ್ಯಾಲಯದ (ಸ್ವಾಯತ್ತ), ಸಹಾ ಯಕ ಪ್ರಾಧ್ಯಾಪಕ ಲಕ್ಷ್ಮಿಕಾಂತ ಪಂಚಾಳ್ ಅವರು ವಿಶೇಷ ಉಪನ್ಯಾಸ ನೀಡಿದರು.

ಕಲಬುರಗಿ ವಿಶ್ವಕರ್ಮ ಏಕದಂಡಿ ಮಠದ ಪರಮ ಪೂಜ್ಯ ಶ್ರೀ ಸುರೇಂದ್ರ ಮಹಾಸ್ವಾಮಿಗಳು, ಕಲಬುರಗಿ ವಿಶ್ವಕರ್ಮ ಮೂರು ಝೂವದೀಶ್ವರ ಮಠದ ಪರಮ ಪೂಜ್ಯ ಶ್ರೀ ಪ್ರಣವ ನಿರಂಜನ ಮಹಾಸ್ವಾಮಿಗಳು ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿ ಕಾರಿ ಕಚೇರಿ ಸಹಾಯಕ ಶಿವಪ್ರಭು ಹಿರೇಮಠ, ವಿಶ್ವಕರ್ಮ ಸಮಾಜದ ಹಿರಿಯ ಮುಖಂಡರು ಶ್ರೀ ಸುಭಾಷ ಪಂಚಾಳ ಹಾಗೂ ಸಮಾ ಜದ ಮುಖಂಡರು ಭಾಗವಹಿಸಿ ದ್ದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಗದೀಶ್ವರಿ ನಾಶಿ ಅವರು ಸ್ವಾಗತಿಸಿದರು. ಇದಕ್ಕೂ ಮುನ್ನ ನೃತ್ಯ ಕಲಾವಿದರಿಂದ ಭರತನಾಟ್ಯ ಪ್ರದರ್ಶಿಸಲಾಯಿತು.

ಧರ್ಮವೇ ನಮ್ಮ ಬದುಕಿನ ದಾರಿ

ಹರಪನಹಳ್ಳಿ,ಸೆ.18-

ಮಾನವ ಜೀವನದ ಉಜ್ವಲ ಭವಿಷ್ಯಕ್ಕೆ ಗುರು ಪರಂಪರೆ ಮುಖ್ಯ. ಧರ್ಮ ನಮ್ಮ ಬದುಕಿನ ದಾರಿಯಾದರೆ ಸಂಸ್ಕೃತಿ ನಮ್ಮ ಶಕ್ತಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಅವರು ಶುಕ್ರವಾರ ನಗರದ ಶ್ರೀ ಗುರು ಮಧ್ವ ಮಂಟಪದಲ್ಲಿ ನಡೆದ ಜನಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಧರ್ಮವು ಮನುಷ್ಯನಿಗೆ ಸತ್ಯ ನೀತಿ ಸಂಯಮ ಸದಾಚಾರದ ಮಾರ್ಗವನ್ನು ತೋರಿಸುತ್ತದೆ. ಗುರು ಸಂತರ ಮಾರ್ಗದರ್ಶನದಲ್ಲಿ ನಡೆಯುವ ಇಂತಹ ಸಮಾರಂಭಗಳು ಸಮಾಜದಲ್ಲಿ ಭಕ್ತಿ ಮತ್ತು ಧಾರ್ಮಿಕ ಪ್ರಜ್ಞೆಯ ಜೊತೆಗೆ ಪರಸ್ಪರ ಪ್ರೀತಿ ಸೌಹಾರ್ದ ಹಾಗೂ ಸಹೋದರತ್ವವನ್ನು ಬೆಳೆಸುತ್ತವೆ. ಮಕ್ಕಳಲ್ಲಿ ಸಂಸ್ಕಾರ ಯುವ ಜನರಲ್ಲಿ ಧರ್ಮ ಪ್ರಜ್ಞೆ ಸಮಾಜದಲ್ಲಿ ಒಗ್ಗಟ್ಟು ಮೂಡಿಸುವ ಮಹತ್ಕಾರ್ಯವನ್ನು ಶ್ರೀ ರಂಭಾಪುರಿ ಪೀಠ ಮಾಡುವ ಸಂಕಲ್ಪ ಹೊಂದಿದೆ. ಸಕಲ ಜೀವಾತ್ಮರಿಗೆ ಒಳಿತು ಬಯಸಿದ ಶ್ರೀ ಜಗದ್ಗುರು ರೇಣುಕಾ ಚಾರ್ಯರ ಸಂದೇಶಗಳು ಎಲ್ಲ ಕಾಲಕ್ಕೂ ಎಲ್ಲರಿಗೂ ಅನ್ವಯಿಸುತ್ತವೆ. ಪಿ.ಕೆ. ಎಂ.ಪ್ರಶಾಂತ ಅವರ ಧರ್ಮ ನಿಷ್ಠೆ-ಶ್ರದ್ಧೆ ಮತ್ತು ಗುರುಭಕ್ತಿ ಇನ್ನಿತರರಿಗೆ ಮಾದರಿಯಾಗಿದೆ ಎಂದರು.

ತೆಗ್ಗಿನಮಠ ಸಂಸ್ಥಾನದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಬದುಕಿ ಬಾಳುವ ಜನಾಂಗಕ್ಕೆ ಧರ್ಮ ದಾರಿದೀಪ. ಆಧುನಿಕತೆಯ ಹೆಸರಿನಲ್ಲಿ ನಮ್ಮ ಸಂಸ್ಕೃತಿ ಕಲುಷಿತಗೊಳ್ಳಬಾರದೆಂದರು.

ಹಂಪಸಾಗರ ನವಲಿ ಹಿರೇಮಠದ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಗುರುವಿನ ಜ್ಞಾನಾಮೃತದಿಂದ ಜೀವನ ಪಾವನಗೊಳ್ಳುತ್ತದೆ. ತ್ರಿಗುಣಾತೀತನಾದ ಗುರುವಿನ ಕಾರುಣ್ಯ ದೊಡ್ಡದು. ಗುರು ಮತ್ತು ಗುರಿ ಹೊಂದಿ ಜೀವನ ಸಾಗಿಸಿದರೆ ಬಾಳು ಉಜ್ವಲಗೊಳ್ಳುತ್ತದೆ ಎಂದರು. ಪಿ.ಕೆ.ಎಂ.ನಾಗಲಿಂಗಯ್ಯ, ಪಿ.ಕೆ.ಎಂ.ಶಂಭುಲಿಂಗಯ್ಯ, ಶ್ರೀಮತಿ ಗಿರಿಜಮ್ಮ ಚನ್ನವೀರಯ್ಯ ಉಪಸ್ಥಿತರಿದ್ದರು.

ಡಾ.ಪಿ.ಕೆ.ಎಂ.ಪ್ರಶಾಂತ ಅವರು ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಪಿ.ಎಂ. ಶಾಂತವೀರಯ್ಯನವರು ನಿರೂಪಿಸಿದರು.

ನವ ಮತದಾರರ ವಿಶೇಷ ನೋಂದಣಿ ಅಭಿಯಾನಕ್ಕೆ ಚಾಲನೆ

ನಿಖರ ಮತದಾರರ ಪಟ್ಟಿಯಿಂದಲೇ ಪಾರದರ್ಶನ ಚುನಾವಣೆ

ಬಾಗಲಕೋಟೆ ,ಸೆ.19-

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣೆ ಅತ್ಯಂತ ಮಹತ್ವದ ಪ್ರಕ್ರಿಯೆಯಾಗಿದ್ದು, ಚುನಾವಣೆಗಳು ಸಮರ್ಪಕವಾಗಿ ನಡೆಯಲು ಮತದಾರರ ಪಟ್ಟಿಯೂ ಪರಿಶುದ್ದವಾಗಿರಬೇಕೆಂದು ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ ಹೇಳಿದರು.



ನವನಗರದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಸ್ವೀಪ್ ಸಹಯೋಗದಲ್ಲಿ ಹಮ್ಮಿಕೊಂಡ ನವ ಮತದಾರರ ವಿಶೇಷ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ವರ್ಷ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಅಕ್ಟೋಬರ್ 1ಕ್ಕೆ 18 ವರ್ಷ ಪೂರೈಸುವ ಯುವ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.

17 ವರ್ಷ ಮೇಲ್ಪಟ್ಟವರು ಹಾಗೂ ಅಕ್ಟೋಬರ್ 1ಕ್ಕೆ 18 ವರ್ಷ ಪೂರೈಸುವವರು ನಮೂನೆ-6 ಅನ್ನು ಭರ್ತಿ ಮಾಡಿ ಸಲ್ಲಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಮಾಡಿಕೊಳ್ಳಬಹುದಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಇರುವ ಅರ್ಹತೆಗಳು, ನೋಂದಣಿ ಪ್ರಕ್ರಿಯೆ ಹಾಗೂ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾನದ ಮಹತ್ವದ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು.

ದೇಶದ ಭವಿಷ್ಯವನ್ನು ರೂಪಿಸುವಲ್ಲಿ ನವ ಮತದಾರರ ಪಾತ್ರ ಮಹತ್ವದ್ದಾಗಿದೆ. 18 ವರ್ಷ ಪೂರೈಸುವ ಪ್ರತಿಯೊಬ್ಬ ಅರ್ಹ ಯುವ ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಬೇಕು. ಯಾವುದೇ ಅರ್ಹ ಯುವ ಮತದಾರರು ನೋಂದಣಿಯಿಂದ ಹೊರಗುಳಿಯದಂತೆ ವಿಶೇಷ ಅಭಿಯಾನದ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದರು. ನವ ಮತದಾರರ ನೋಂದಣಿಗೆ ಅನುಕೂಲವಾಗುವಂತೆ ಸೆಪ್ಟೆಂಬರ್ 19 ಮತ್ತು 20 ರಂದು ವಿಶೇಷ ನೋಂ ದಣಿ ಅಭಿಯಾನ ಹಮ್ಮಿಕೊಳ್ಳಲಾ ಗಿದೆ. ಈ ಸಂದರ್ಭದಲ್ಲಿ ಅರ್ಹ ಯುವ ಮತದಾರರು ತಮ್ಮ ಸಮೀಪದ ಮತಗಟ್ಟೆಗಳಲ್ಲಿ ನಡೆ ಯುವ ನೋಂದಣಿ ಅಭಿಯಾನದ ಸದುಪಯೋಗ ಪಡೆದುಕೊಂಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸುವಂತೆ ಅವರು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿ ಕಾರಿ ಸಂಗಪ್ಪ, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಜಿ.ಡಿ.ಲಮಾಣಿ, ಜಿ.ಪಂ ಸಹಾಯಕ ಯೋಜನಾ ನಿರ್ದೇಶಕ ಭೀಮಪ್ಪ ತಳವಾರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾಂವಿ ಸೇರಿದಂತೆ ಇತರರು ಉಪಸ್ಥಿತರಿದ್ದರು, ಸಂಗಮೇಶ ಸಣ್ಣತಂಗಿ ಕಾರ್ಯಕ್ರಮ ನಿರೂಪಿಸಿದರು.

ಒಂದನೇಯ ಪುಟದಿಂದ

ರೈತರನ್ನು ಉಳಿಸಲು ನಿಮ್ಮ ಬಳಿ ಬಂದಿದ್ದೇನೆ: ಸಿಎಂ ಡಿ.ಕೆ.ಶಿ

ಏಕೆಂದರೆ, ಮಳೆ ಬರುತ್ತಿರಲಿ. ಕಸ್ತೂರಿ ರಂಗನ್ ವರದಿಯ ಕುರಿತು ಮಾಡಲು ಯತ್ನಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಬೇಕು. 1990ರಲ್ಲಿ ಬಂಗಾರಪ್ಪನವರು ಸಿಎಂ ಆಗಿದ್ದರು. ಅಡಕೆಯಿಂದ ಕೇಂದ್ರಕ್ಕೆ ಎಷ್ಟು ತೆರಿಗೆ ಹೋಗುತ್ತದೆ. ಅಡಕೆಯ ಮೇಲಿನ ತೆರಿಗೆಯಿಂದ ಅಡಕೆ ದರ ಕಡಿಮೆ ಆಗುತ್ತದೆ. ಕಸ್ತೂರಿ ರಂಗನ್ ವರದಿ ಒಪ್ಪಲ್ಲ, ಕಾವೇರಿ ನೀರು ಬಿಡಲ್ಲ ಎಂದು ಬಂಗಾರಪ್ಪನವರ ವಿಶೇಷ ಅಧಿವೇಶನ ಮಾಡಿದ್ದರು. ಅದೇ ರೀತಿ ಅವರ ಶಿಷ್ಯ ಡಿ.ಕೆ.ಶಿವಕುಮಾರ್ ಅವರು ಈಗ ಕಸ್ತೂರಿ ರಂಗನ್ ವರದಿಗಾಗಿ ವಿಶೇಷವಾದ ಅಧಿವೇಶನ ಕರೆದಿದ್ದಾರೆ ಎಂದರು.

ಗಣೇಶ ವಿಸರ್ಜನೆ ವೇಳೆ ಟ್ರ್ಯಾಕ್ಟರ್ ಹರಿದು ಇಬ್ಬರು ಬಾಲಕರು ಸಾವು

ಅಪಘಾತಕ್ಕೆ ನಿಖರ ಕಾರಣವೇನು ಎಂಬುದನ್ನು ಪೊಲೀಸರು ತನಿಖೆ ಮೂಲಕ ಪತ್ತೆಹಚ್ಚುತ್ತಿದ್ದಾರೆ. ಗಣೇಶ ವಿಸರ್ಜನೆ ಸಂಭ್ರಮದ ನಡುವೆ ಸಂಭವಿಸಿದ ಈ ದುರಂತದಿಂದ ಸ್ಥಳೀಯರು ಹಾಗೂ ಮೆರವಣಿಗೆಯಲ್ಲಿ ಭಾಗವಹಿಸಿದ್ದವರಲ್ಲಿ ದುಃಖದ ವಾತಾವರಣ ನಿರ್ಮಾಣವಾಗಿದೆ.

ಜಿಲ್ಲೆಯಲ್ಲಿ ಬರಗಾಲ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಗತ್ಯವೆ -ಅಣ್ಣಪ್ಪ ಮೇಟಿಗೌಡ

ಸಮ್ಮೇಳನದ ದಿನಾಂಕ ನಿಗದಿಪಡಿಸಿರುವುದು ಸೂಕ್ತ ಕ್ರಮವಲ್ಲ ಎಂದು ಅವರು ಹೇಳಿದ್ದಾರೆ.

ನಾಲ್ಕು ವರ್ಷ ಎಂಟು ತಿಂಗಳು ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸಲು ಸಾಧ್ಯವಾಗದವರಿಗೆ ಅಧಿಕಾರಾವಧಿ ಮುಗಿಯಲು ಇನ್ನೆರಡು ತಿಂಗಳು ಬಾಕಿ ಇರುವಾಗ ಇಷ್ಟೊಂದು ಆತುರ ಏಕೆ ಎಂಬುದನ್ನು ಕಸಾಪ ಪದಾಧಿಕಾರಿಗಳು ಸ್ಪಷ್ಟಪಡಿಸಬೇಕು. ಬರಗಾಲದ ಸಂದರ್ಭದಲ್ಲಿ ರೈತರು ಸಂಕಷ್ಟದಲ್ಲಿರುವುದನ್ನು ಪರಿಗಣಿಸಿ ಸಮ್ಮೇಳನವನ್ನು ಮುಂದೂಡಿ, ಬರಗಾಲದ ನಂತರ ಎಲ್ಲರೂ ಸೇರಿ ಅದ್ದೂರಿಯಾಗಿ ನಡೆಸಲಿ. ಆಗ ತಾವೂ ಕೂಡ ಅವರೊಂದಿಗೆ ಸಂಪೂರ್ಣವಾಗಿ ಕೈಜೋಡಿಸುವುದಾಗಿ ಹೇಳಿದರು.

ಪ್ರಸ್ತುತ ನಿರ್ಧಾರವನ್ನು ಬದಲಿಸದೆ ಇದೇ ರೀತಿಯಲ್ಲಿ ಸಮ್ಮೇಳನ ನಡೆಸಲು ಮುಂದಾದರೆ ಮುಂದಿನ ಹಂತದಲ್ಲಿ ತಮ್ಮ ಹೋರಾಟದ ರೂಪುರೇಷೆಯನ್ನು ಪ್ರಕಟಿಸಲಾಗುವುದು ಎಂದು ಅಣ್ಣಪ್ಪ ಮೇಟಿಗೌಡ ಎಚ್ಚರಿಸಿದ್ದಾರೆ, ಈ ಪತ್ರಿಕಾ ಗೋಷ್ಠಿಯಲ್ಲಿ ಕಲಾ ಸಂಕುಲ ಸಂಸ್ಥೆಯ ಕಾರ್ಯದರ್ಶಿಗಳಾದ ಮಾರುತಿ ಬಡಿಗೇರ್ ಉಪಸ್ಥಿತರಿದ್ದರು.

ಗಿಲ್ಲೆಸುಗೂರಿನಲ್ಲಿ ಪ್ರಜಾ ಸೇವೆ ಜನರ ಬಳಿಗೆ ಆಡಳಿತ, ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ- ಗ್ರಾಮೀಣ ಶಾಸಕ ಬಸನಗೌಡ ದದ್ದಲ್

ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುವುದು ನಮ್ಮ ಬದ್ಧತೆ. ಗಿಲ್ಲೆಸುಗೂರಿನಲ್ಲಿ ನಡೆದ ಇಂದಿನ ಪ್ರಜಾ ಸೇವೆ ಕಾರ್ಯಕ್ರ ಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಸಮಸ್ಯೆಗಳನ್ನು ಹಂಚಿಕೊಂಡ ಪ್ರತಿಯೊಬ್ಬ ನಾಗರಿಕರಿಗೂ ಧನ್ಯವಾದಗಳು. ಜನರ ಬಳಿಗೆ ಆಡಳಿತ ಜನರ ಸಮಸ್ಯೆಗೆ ತ್ವರಿತ ಪರಿಹಾರ ಇದೇ ನಮ್ಮ ಪ್ರಜಾ ಸೇವೆಯ ಸಂಕಲ್ಪ.

ರಾಯಚೂರು ಜಿಪಂ ಸ್ವಚ್ಛ ಭಾರತ ಮಿಷನ್ ನಡಿ ನಿರ್ಮಿಸಿದ ಶೌಚಾಲಯ, ಬಳಕೆಯ ವರದಿ ನೀಡಲು ಸೂಚನೆ

ಕಟ್ಟಡವನ್ನು ಬೇರೆ ಉದ್ದೇಶಕ್ಕೆ ಬಳಸಲಾಗುತ್ತಿದೆಯೇ ಹಾಗೂ ಇನ್ನೂ ಶೌಚಾಲಯ ನಿರ್ಮಾಣವಾಗದ ಕುಟುಂಬಗಳಿವೆಯೇ ಎಂಬ ಕುರಿತು ಸಮೀಕ್ಷೆಯ ಮೂಲಕ ಮಾಹಿತಿ ಪಡೆಯಬೇಕು ಎಂದರು.

ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಶೌಚಾಲಯಗಳ ವಾಸ್ತವ ಸ್ಥಿತಿ, ಶೌಚಾಲಯ ಬಳಕೆಯ ಪ್ರಮಾಣ ಹಾಗೂ ಶೌಚಾಲಯ ಬಳಕೆಗೆ ಸಂಬಂಧಿಸಿದ ಸಾಮಾಜಿಕ ಸಮಸ್ಯೆಗಳ ಕುರಿತು ನಿಖರ ಮಾಹಿತಿ ಸಂಗ್ರಹಿಸುವುದು ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಸಮೀಕ್ಷೆಯ ಸಂದರ್ಭದಲ್ಲಿ ನಿಗದಿತ ಶೌಚಾಲಯ ಬಳಕೆ ಪರಿಶೀಲನಾ ಪಟ್ಟಿಯನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ಶೌಚಾಲಯ ನಿರ್ಮಾಣಗೊಂಡಿದೆಯೇ, ಪ್ರಸಕ್ತ ಬಳಕೆಯಲ್ಲಿದೆಯೇ, ನಿರ್ಮಾಣಗೊಂಡಿದ್ದರೂ ಬಳಕೆ ಮಾಡದಿದ್ದರೆ ಅದಕ್ಕೆ ನಿಜವಾದ ಕಾರಣವೇನು ಎಂಬುದನ್ನು ಸ್ಪಷ್ಟವಾಗಿ ದಾಖಲಿಸಬೇಕು ಎಂದು ಸೂಚಿಸಿದರು.

ಗ್ರಾಮ ಪಂಚಾಯತ್ ಗಳಲ್ಲಿ ಶೌಚಾಲಯ ತ್ಯಾಜ್ಯವನ್ನು ಸಕ್ಕಿಂಗ್ ಯಂತ್ರದ ಮೂಲಕ ಸಂಗ್ರಹಿಸಿ ಡಂಪಿಂಗ್ ಪ್ಲಾಂಟ್ ನಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಸಕ್ಕಿಂಗ್ ಯಂತ್ರಗಳು ತಾಲೂಕು ಮಟ್ಟದಲ್ಲಿದ್ದು, ಅಗತ್ಯವಿದ್ದಲ್ಲಿ ನಿಗದಿತ ಶುಲ್ಕ ಪಾವತಿಸಿ ಸೇವೆ ಪಡೆಯಬಹುದು ಎಂದು ಹೇಳಿದರು.

ಕೆಲವು ಕಡೆಗಳಲ್ಲಿ ಸಕ್ಕಿಂಗ್ ಯಂತ್ರಗಳ ಕೊರತೆ ಇದ್ದು, ಅಂತಹ ಸಂದರ್ಭಗಳಲ್ಲಿ ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಶೌಚಾಲಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬಹುದು ಎಂದರು.

ಪ್ರತಿಯೊಂದು ಗ್ರಾಮ ಪಂಚಾಯತ್ ಗೂ ಕಸ ವಿಲೇವಾರಿ ವಾಹನ ನೀಡಲಾಗಿದೆ. ವಾಹನಗಳ ಮೂಲಕ ಪ್ರತಿದಿನ ಕಸ ಸಂಗ್ರಹಿಸಲಾಗುತ್ತಿದೆಯೇ, ಸಂಗ್ರಹಿಸಿದ ತ್ಯಾಜ್ಯವನ್ನು ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸಮರ್ಪಕವಾಗಿ ಸಂಗ್ರಹಿಸಲಾಗುತ್ತಿದೆಯೇ ಹಾಗೂ ಕಸವನ್ನು ಹಸಿ ಮತ್ತು ಒಣ ತ್ಯಾಜ್ಯವಾಗಿ ವಿಂಗಡಿಸಲಾಗುತ್ತಿದೆಯೇ ಎಂಬುದರ ಕುರಿತು ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶೌಚಾಲಯಗಳ ಸ್ಥಿತಿಗತಿ ಕುರಿತು ಸಮರ್ಪಕವಾಗಿ ಸಮೀಕ್ಷೆ ನಡೆಸಿ, ಕುಟುಂಬಗಳ ವಿಂಗಡಣೆ, ಶೌಚಾಲಯ ನಿರ್ಮಾಣಗೊಂಡಿರುವುದು, ನಿರ್ಮಾಣದ ಅಗತ್ಯವಿರುವ ಕುಟುಂಬಗಳ ಸಂಖ್ಯೆ ಸೇರಿದಂತೆ ಎಲ್ಲ ಮಾಹಿತಿಯನ್ನು ನಿಖರವಾಗಿ ನಮೂದಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಶರಣಬಸವ, ಯೋಜನಾಧಿಕಾರಿ ಟಿ.ರೋಟಿ, ಜಿಪಂ ಉಪ ಕಾರ್ಯದರ್ಶಿ ಹಾಲ್ ಸಿದ್ದಪ್ಪ ಪೂಜಾರಿ, ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ್ ಸೇರಿದಂತೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸುವುದು ಅಗತ್ಯ : ಸಚಿವ ಈಶ್ವರ ಬಿ.ಖಂಡ್ರೆ

ಬೀದರ,ಸೆ.18-

ಜಾಗತಿಕ ತಾಪಮಾನ ಹಾಗೂ ಹವಾಮಾನ ವೈಪರೀತ್ಯದಿಂದ ನಾವು ಸಾಕಷ್ಟು ಅಪಾಯವನ್ನು ಎದುರಿಸುತ್ತೇವೆ ಆದ್ದರಿಂದ ಹಸಿರು ಹೊದಿಕೆ ಹೆಚ್ಚಿಸುವುದು ಮತ್ತು ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸುವುದು ಇಂದಿನ ತುರ್ತು ಅಗತ್ಯ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಮತ್ತು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಬುಧವಾರ ಅರಣ್ಯ ಇಲಾಖೆ, ಪ್ರಾದೇಶಿಕ ಅರಣ್ಯ ವಿಭಾಗ, ಬೀದರ ಹಾಗೂ ಪ್ರಾದೇಶಿಕ ಅರಣ್ಯ ವಲಯ ಭಾಲ್ಕಿ ಇವರ ಸಂಯುಕ್ತಾಶ್ರದಲ್ಲಿ ಭಾಲ್ಕಿಯ ಇಂಚುರಿ ಗ್ರಾಮದಲ್ಲಿ ಆಯೋಜಿಸಿದ ನೂತನವಾಗಿ ನಿರ್ಮಿಸಲಾಗಿರುವ ಡಾ. ಚನ್ನಬಸವ ಪಟ್ಟದೇವರ ವೃಕ್ಷೋಧ್ಯಾನ (ಇಂಚುರ್ ಟ್ರೀ ಪಾರ್ಕ್) ಉದ್ಘಾಟನಾ ಕಾರ್ಯಕ್ರಮದಲ್ಲಿ ವೃಕ್ಷೋಧ್ಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಭಾಲ್ಕಿ ತಾಲೂಕಿನ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗಾಗಿ ಮಕ್ಕಳಿಗಾಗಿ ಇಂಚುರ್ ಗ್ರಾಮದಲ್ಲಿ ಸುಸಜ್ಜಿತ ನೂತನ ವೃಕ್ಷೋ ದ್ಯಾನವನ್ನು ನಿರ್ಮಿಸಲಾಗಿದ್ದು ಇದರ ಲಾಭವನ್ನು ಎಲ್ಲರೂ ಪಡೆಯಬೇಕೆಂದರು. ಮೈಸೂರಿನ ಬೃಂದಾವನದ ಮಾದರಿಯಲ್ಲೇ ಇಲ್ಲಿಯೂ ಸಂಜೆ ವೇಳೆ ಸಾರ್ವಜನಿಕರನ್ನು ಸೆಳೆಯಲು ವರ್ಣರಂಜಿತ ಸಂಗೀತ ಕಾರಂಜಿ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಈ ವೃಕ್ಷೋದ್ಯಾದಲ್ಲಿ 250ಕ್ಕೂ ಹೆಚ್ಚು ಪ್ರಭೇದಗಳ ಸಸಿಗಳನ್ನು ನೆಡಲಾಗಿದ್ದು, ಮುಂದಿನ ದಿನಗಳಲ್ಲಿ 'ಮಿಯಾವಾಕಿ' ಮಾದರಿಯಲ್ಲಿ 10,000 ಸಸಿಗಳನ್ನು ನೆಡುವ ಉದ್ದೇಶವಿದೆ. ಪ್ರತಿ ಸಸಿಯ ಮುಂದೆ ವೈಜ್ಞಾನಿಕ ಹೆಸರು, ಜೀವಿತಾವಧಿ ಹಾಗೂ ಔಷಧೀಯ ಪ್ರಯೋಜನಗಳ ಮಾಹಿತಿ ಫಲಕ ಅಳವಡಿಸಲಾಗಿದ್ದು, ಮಕ್ಕಳಿಗೆ ಮಾರ್ಗದರ್ಶನ ನೀಡಲು ಗೈಡ್‌ಗಳ ವ್ಯವಸ್ಥೆಯೂ ಇರಲಿದೆ. ಉದ್ಯಾನದಲ್ಲಿ ಪ್ಲಾಸ್ಟಿಕ್, ಕಸ ತರುವುದನ್ನು ಸಂಪೂರ್ಣ ನಿಷೇಧಿಸಲಾಗುವುದು, ಉದ್ಯಾನವನ್ನು ಸ್ವಂತ ಮನೆಯಂತೆ ಕಾಪಾಡುವಂತೆ ಮನವಿ ಮಾಡಿದ ಅವರು ಬೀದರ್ ಜಿಲ್ಲೆಯ ಪ್ರತಿ ತಾಲೂಕಿಗೆ ತಲಾ 2 ಕೋಟಿ ರೂ. ವೆಚ್ಚದಲ್ಲಿ ಪಾರ್ಕ್-ಕಚೇರಿ, ಭಾಲ್ಕಿಯಲ್ಲಿ 2 ಕೋಟಿ, ಬೀದರ್‌ನಲ್ಲಿ 5 ಕೋಟಿ ವೆಚ್ಚದ ಅರಣ್ಯ ಭವನ ಹಾಗೂ ಹೊನ್ನಿಕೇರಿಯಲ್ಲಿ 15 ಕೋಟಿ ರೂ. ವೆಚ್ಚದ ಪರಿಸರ ಪ್ರವಾಸೋದ್ಯಮ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು. ಭಾಲ್ಕಿ ಹಿರೇಮಠ್ ಸಂಸ್ಥಾನದ ಪೀಠಾಧೀಪಧಿ ಗುರುಬಸವ ಪಟ್ಟದೇ ವರು ಮಾತನಾಡಿ, ರಾಮಾ ಯಣ, ಮಹಾಭಾರತ ನಡೆದದ್ದು ಪ್ರಕೃತಿಯಲ್ಲಿ, ಬುದ್ದನಿಗೆ ಜ್ಞಾನೋದಯ ಆಗಿದ್ದು ಮರದ ಕೆಳಗಡೆ. ಇದೀಗ ಇಂಚುರ್ ಗ್ರಾಮದ ಹತ್ತಿರ 13 ಎಕರೆ ಭೂಮಿಯಲ್ಲಿ ಡಾ. ಚನ್ನಬಸವ ಪಟ್ಟದೇವರ ಹೆಸರಲ್ಲಿ ವೃಕ್ಷೋಧ್ಯಾನ ನಿರ್ಮಾಣ ಮಾಡಿದ್ದೂ ಖುಷಿಯ ಸಂಗತಿಯಾಗಿದೆ. ಇಲ್ಲಿ ಶಾಂತಿ ಮತ್ತು ನೆಮ್ಮದಿ ದೊರೆಯುವಂತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಂ.ಜಿ.ಮೂಳೆ ಮಾತನಾಡಿ, ನಮ್ಮದು ಅರಣ್ಯ, ಮರ, ಮಳೆ ಕಡಿಮೆ ಇರುವ ಭೂಭಾಗವಾಗಿದೆ ಇಂತಹ ಭಾಗದಲ್ಲಿ ಟ್ರೀ ಪಾರ್ಕ್ ನಿರ್ಮಾಣ ಮಾಡಿದ್ದು ಸಂತಸ ತಂದಿದೆ. ದಿನಾಲೂ ಇಲ್ಲಿಗೆ ಸಾವಿರಾರು ವಿದ್ಯಾರ್ಥಿಗಳು, ಜನರು ಬಂದು ನೋಡುವ ಪ್ರೇಕ್ಷಣಿಕ ಸ್ಥಳ ಆಗಬಹುದು ಆದ್ದರಿಂದ ಈ ಟ್ರೀ ಪಾರ್ಕ್ ಹತ್ತಿರ ಹೊಟೇಲ್ ಗಳು ಹಾಗೂ ರೆಸ್ಟೋರೆಂಟ್ ಗಳು ರಚನೆಯಾಗಿ ಸ್ಥಳೀಯರಿಗೆ ಉದ್ಯೋಗ ಅವಕಾಶಗಳು ದೊರೆಯಬಹುದು ಎಂದ ಅವರು ಕಾರಂಜಾ ಜಲಾಶಯ ಹತ್ತಿರ ಬೃಂದಾವನದ ಮಾದರಿಯಲ್ಲಿ ವನ ನಿರ್ಮಾಣ ಮಾಡುವಂತೆ ಸಚಿವರಲ್ಲಿ ಮನವಿ ಮಾಡಿದರು. ಹಿರೇಮಠ್ ಸಂಸ್ಥಾನದ ಡಾ. ಬಸವಲಿಂಗ ಪಟ್ಟದೇವರು ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠ್ಠಲ ರಾವ್, ಗ್ಯಾರಂಟಿ ಸಮಿತಿಯ ಭಾಲ್ಕಿ ತಾಲೂಕಾಧ್ಯಕ್ಷ ಹಣಮಂತರಾವ್ ಚೌವ್ಹಾಣ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಸಂತ್ ರೆಡ್ಡಿ ಕೆ. ವಿ., ಬೀದರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಸುಮಿತ ಕುಮಾರ ಪಾಟೀಲ್, ಶ್ರೀನಿವಾಸ್ ಯಾರಡೋಣಿ, ಭಾಲ್ಕಿ ವಲಯ ಅರಣ್ಯಧಿಕಾರಿ ಸಚಿನ್ ಪಾಟೀಲ್, ಕಲಬುರಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶೀಶ್ ರೆಡ್ಡಿ, ವಿರೇಶ್ ಕಲ್ಯಾಣೆ, ಆರ್ ಎಫ್ ಒ ಸಂಗೀತಾ ಸೇರಿದಂತೆ ವಿವಿಧ ತಾಲೂಕ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ವಿದ್ಯಾರ್ಥಿ ಆರೋಗ್ಯ ಬಂಧು ಪುಸ್ತಕ ಲೋಕಾರ್ಪಣೆ



ಬೀದರ, ಸೆ.18-

ನಗರದ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರೊಂದಿಗೆ, ಬೀದರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಗಿತ್ತೆ ಮಾಧವ್ ವಿಠ್ಠಲರಾವ್ ಅವರು ವಿದ್ಯಾರ್ಥಿಗಳ ಆರೋಗ್ಯದ ಸಮಗ್ರ ಮೇಲ್ವಿಚಾರಣೆಗೆ ರೂಪಿಸಲಾಗಿರುವ ವಿದ್ಯಾರ್ಥಿ ಆರೋಗ್ಯ ಬಂಧು ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.

ಬೀದರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಮುರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ವಸತಿ ನಿಲಯಗಳಲ್ಲಿ ಸುಮಾರು 25 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಪ್ರತಿ ತಿಂಗಳು ಆರೋಗ್ಯ ತಪಾಸಣೆ ನಡೆಸುವ ವಿಶೇಷ ಕಾರ್ಯಕ್ರಮವನ್ನು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದಡಿ ಪ್ರತಿ ತಿಂಗಳು ವೈದ್ಯರ ತಂಡಗಳು ಸಂಬಂಧಿಸಿದ ವಸತಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಗ್ರ ಆರೋಗ್ಯ ತಪಾಸಣೆ ನಡೆಸಲಿವೆ. ವಿದ್ಯಾರ್ಥಿಗಳ ದೈಹಿಕ ಆರೋಗ್ಯ, ಕಂಡುಬರುವ ಆರೋಗ್ಯ ಸಮಸ್ಯೆಗಳು ಸೇರಿದಂತೆ ಅಗತ್ಯವಿರುವ ಆರೋಗ್ಯ ಸಂಬಂಧಿತ ವಿಷಯಗಳನ್ನು ವೈದ್ಯರು ಪರಿಶೀಲಿಸಲಿದ್ದಾರೆ.

ಆರೋಗ್ಯ ತಪಾಸಣೆ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿಯಲ್ಲಿ ಆರೋಗ್ಯ ಸಮಸ್ಯೆ ಕಂಡುಬಂದಲ್ಲಿ, ತಪಾಸಣೆ ನಡೆಸಿದ ವೈದ್ಯರು ಸಮಸ್ಯೆಯ ವಿವರ ಹಾಗೂ ಅಗತ್ಯ ವೈದ್ಯಕೀಯ ಸಲಹೆಯನ್ನು ವಿದ್ಯಾರ್ಥಿ ಆರೋಗ್ಯ ಬಂಧು ಪುಸ್ತಕದಲ್ಲಿ ದಾಖಲಿಸಲಿದ್ದಾರೆ. ಇದರಿಂದ ವಿದ್ಯಾರ್ಥಿಯ ಆರೋಗ್ಯ ಸಮಸ್ಯೆಯ ದಾಖಲೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ ಮುಂದಿನ ಆರೋಗ್ಯ ತಪಾಸಣೆ ಸಂದರ್ಭದಲ್ಲಿ ಅದರ ಪ್ರಗತಿಯನ್ನು ಗಮನಿಸಲು ಅನುಕೂಲವಾಗಲಿದೆ.

ಇದಲ್ಲದೆ, ಜಿಲ್ಲಾ ಹಂತದ ಅಧಿಕಾರಿಗಳು ವಸತಿ ನಿಲಯಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿ ಆರೋಗ್ಯ ಬಂಧು ಪುಸ್ತಕದಲ್ಲಿರುವ ಆರೋಗ್ಯ ತಪಾಸಣೆ ವರದಿಗಳನ್ನು ಪರಿಶೀಲಿಸಲಿದ್ದಾರೆ. ಯಾವುದೇ ವಿದ್ಯಾರ್ಥಿಗೆ ಆರೋಗ್ಯ ಸಮಸ್ಯೆ ಕಂಡುಬಂದಿರುವುದು ದಾಖಲಾದಲ್ಲಿ, ಆ ಸಮಸ್ಯೆಯ ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಪರಿಹಾರ ಮತ್ತು ವೈದ್ಯಕೀಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ವಿದ್ಯಾರ್ಥಿಗಳ ಆರೋಗ್ಯ ಸಮಸ್ಯೆಗಳನ್ನು ಕೇವಲ ದಾಖಲಿಸುವುದಕ್ಕೆ ಸೀಮಿತವಾಗದೆ, ಅವುಗಳಿಗೆ ಸೂಕ್ತ ಪರಿಹಾರ ದೊರಕುವಂತೆ ನಿರಂತರ ಮೇಲ್ವಿಚಾರಣೆ ನಡೆಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ತಪಾಸಣೆಯಲ್ಲಿ ಕಂಡುಬರುವ ಸಮಸ್ಯೆಗಳಿಗೆ ಅನುಗುಣವಾಗಿ ಅಗತ್ಯವಿರುವ ಹೆಚ್ಚಿನ ಚಿಕಿತ್ಸೆ ಹಾಗೂ ಆರೋಗ್ಯ ಸೇವೆಗಳನ್ನು ಒದಗಿಸಲು ಸಂಬಂಧಿಸಿದ ಇಲಾಖೆಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತದೆ.

ವಸತಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ನಿರಂತರ ಕಾಳಜಿ ವಹಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಜವಾಬ್ದಾರಿ ವಹಿಸಲಿದೆ. ಆರೋಗ್ಯ ಇಲಾಖೆಯ ವೈದ್ಯರು ಮತ್ತು ಸಿಬ್ಬಂದಿಯ ಸಹಯೋಗದೊಂದಿಗೆ ನಿಯಮಿತ ಆರೋಗ್ಯ ತಪಾಸಣೆ ನಡೆಸುವುದರಿಂದ ವಿದ್ಯಾರ್ಥಿಗಳ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ.

ವಿದ್ಯಾರ್ಥಿಗಳ ಆರೋಗ್ಯವು ಅವರ ಶಿಕ್ಷಣ, ಮಾನಸಿಕ ನೆಮ್ಮದಿ ಹಾಗೂ ಭವಿಷ್ಯದ ಬೆಳವಣಿಗೆಗೆ ಪ್ರಮುಖವಾಗಿರುವುದರಿಂದ, ವಸತಿ ನಿಲಯಗಳಲ್ಲಿ ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಈ ಉಪಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿ ಆರೋಗ್ಯ ಬಂಧು ಪುಸ್ತಕವು ವಿದ್ಯಾರ್ಥಿಗಳ ಆರೋಗ್ಯದ ದಾಖಲಾತಿ, ಮೇಲ್ವಿಚಾರಣೆ ಹಾಗೂ ಅಗತ್ಯ ಪರಿಹಾರ ಕ್ರಮಗಳನ್ನು ಒಂದೇ ವ್ಯವಸ್ಥೆಯಡಿ ತರಲು ಸಹಕಾರಿಯಾಗಲಿದೆ.



ಕಲ್ಯಾಣ ಕರ್ನಾಟಕ ಸ್ಲಂಗಳ ಅಭಿವೃದ್ಧಿಗೆ ಕೆಕೆಆರ್‌ಡಿಬಿಯಿಂದ 100 ಕೋಟಿ ರೂ. ಅನುದಾನಕ್ಕೆ ಆಗ್ರಹ

ಕಲಬುರಗಿ, ಸೆ.19-

ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಸ್ಲಂಗಳ ಸಮಗ್ರ ಅಭಿವೃದ್ಧಿಗಾಗಿ ಕೆಕೆಆರ್‌ಡಿಬಿ ವತಿಯಿಂದ ಪ್ರತಿ ವರ್ಷ 100 ಕೋಟಿ ರೂ. ವಿಶೇಷ ಅನುದಾನ ಮೀಸಲಿಡಬೇಕು ಎಂದು ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಘಟಕ ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿರುವ ಸಂಘಟನೆ, ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳ ಸ್ಲಂ ನಿವಾಸಿಗಳ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಸರ್ಕಾರ ತುರ್ತಾಗಿ ಸ್ಪಂದಿಸಬೇಕು ಎಂದು ಒತ್ತಾಯಿಸಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ 352 ಘೋಷಿತ ಹಾಗೂ 50 ಅಘೋಷಿತ ಸ್ಲಂಗಳು ಇದ್ದು, ಈ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಸ್ಲಂ ನಿವಾಸಿಗಳ ಜೀವನಮಟ್ಟ ಸುಧಾರಿಸಲು ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಪ್ರತ್ಯೇಕ ಅನುದಾನ ಅಗತ್ಯವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಖಾಸಗಿ ಜಾಗಗಳಲ್ಲಿ ವಾಸಿಸುತ್ತಿರುವ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ನೀಡಬೇಕು. ಜೊತೆಗೆ ಅರ್ಹ ಕುಟುಂಬಗಳಿಗೆ ಉಚಿತ ವಸತಿ ಮನೆಗಳನ್ನು ನಿರ್ಮಿಸಿ ನೀಡಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಸ್ಲಂ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿಗೆ ಕೆಕೆಆರ್‌ಡಿಬಿ ಮೂಲಕ ಪ್ರತಿ ವರ್ಷ 100 ಕೋಟಿ ರೂ. ಅನುದಾನ ಬಿಡುಗಡೆ ಮಾಡಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಮನವಿಯಲ್ಲಿ ಪ್ರಮುಖವಾಗಿ ಆಗ್ರಹಿಸಲಾಗಿದೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಸಂಚಾಲಕಿ ರೇಣುಕಾ ಸರಡಗಿ, ಜಿಲ್ಲಾ ಅಧ್ಯಕ್ಷೆ ಗೌರಮ್ಮ ಮಾಕಾ ಹಾಗೂ ಖಜಾಂಚಿ ಸುನಿತಾ ಕೊಳ್ಳೂರ ಉಪಸ್ಥಿತರಿದ್ದರು.

ಜಮೀನು ವಿವಾದ : ಅಣ್ಣನಿಂದಲೇ ತಮ್ಮನ ಹತ್ಯೆ

ಕಲಬುರಗಿ ,ಸೆ.19-


ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಅಣ್ಣ-ತಮ್ಮಂದಿರ ನಡುವೆ ನಡೆದ ಗಲಾಟೆ ಕೊಲೆಯಲ್ಲಿ ಅಂತ್ಯಗೊಂಡಿರುವ ಘಟನೆ ಕಲಬುರಗಿ ತಾಲೂಕಿನ ಭೂಪಾಲತೆಗನೂರ ಗ್ರಾಮದಲ್ಲಿ ನಡೆದಿದೆ.

ಮೃತನನ್ನು ಭೂಪಾಲತೆಗನೂರ ಗ್ರಾಮದ ಧನರಾಜ್ ಮೈಲಾರಿ ಶೆಳ್ಳಗಿ (34) ಎಂದು ಗುರುತಿಸಲಾಗಿದೆ. ಪ್ರಕರಣದಲ್ಲಿ ಅವರ ಸಹೋದರ ಶಿವರಾಜ್ ಶೆಳ್ಳಗಿ ವಿರುದ್ಧ ಕೊಲೆ ಆರೋಪ ಕೇಳಿಬಂದಿದೆ.

ಉತ್ತಮ ಅಹಾರ ಸೇವನೆ ಮಾಡಿರಿ. ಆರೋಗ್ಯವನ್ನು ಸದೃಢವಾಗಿ ಇಟ್ಟುಕೊಳ್ಳಿರಿ ಡಾ.ಬಿರಾದಾರ

ರಾಯಚೂರು,ಸೆ.19-

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ಕೆಲ ಮಕ್ಕಳು ತಮ್ಮ ಬಾಯಿ ರುಚಿಗಾಗಿ ಮನೆಯಲ್ಲಿ ಮಾಡಿರುವ ಆಹಾರ ಪದಾರ್ಥಗಳನ್ನು ಬಿಟ್ಟು ಹೊರಗಡೆ ಮಾಡಿರುವಂತ ಪದಾರ್ಥಗಳನ್ನ ಹೆಚ್ಚು ಸೇವನೆ ಯನ್ನು ಮಾಡುತ್ತಿದ್ದಾರೆ. ಕುರು ಕುರಿ, ಪಿಜ್ಜಾ .ಬರ್ಗರ್ ಇನ್ನಿತರ ಜಂಗು ಫುಡ್ ಸೇವನೆಯಿಂದ ಆರೋಗ್ಯದ ಮೇಲೆ ಬೆಳೆಯುವ ಮಕ್ಕಳ ಮೇಲೆ



ಕೆಟ್ಟ ಪರಿಣಾಮ ಬೀರುತ್ತದೆ. 18 ವರ್ಷದ ಒಳಗೆ ಹಲವಾರು ರೀತಿಯ ರೋಗಗಳಿಗೆ ಅವರು ತುತ್ತಾಗುತ್ತಿದ್ದಾರೆ ಕಾರಣ ಅವರು ತಿನ್ನುವ ಆಹಾರ .ಅದು ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ವಿದ್ಯಾರ್ಥಿಗಳೇ ಮನೆಯಲ್ಲಿ ಮಾಡಿರುವಂತ ಆಹಾರ ಪದಾರ್ಥವನ್ನು ಹೆಚ್ಚು ಸೇವನೆ ಮಾಡಿರಿ .ಜೊತೆಗೆ ಹಸಿರು ಕಾಯಿಪಲ್ಲೆ ಕಾಳುಗಳು ಜೊತೆಗೆ ಟಮೊಟೊ. ಗಜ್ಜರಿ .ಸೌತೆಕಾಯಿ, ಬಾಳೆಹಣ್ಣು ಇನ್ನಿತರ ಹಣ್ಣುಗಳು ಮತ್ತು ತರಕಾರಿಗಳನ್ನು ಹೆಚ್ಚು ಸೇವನೆ ಮಾಡಬೇಕು ಜೊತೆಗೆ ನಿಮ್ಮ ಆರೋಗ್ಯದ ವೈಯಕ್ತಿಕ ಸ್ವಚ್ಚತೆ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು ಹೆಚ್ಚು ತರಕಾರಿಗಳನ್ನ ಸೇವನೆ ಮಾಡುವುದರ ಮೂಲಕ ಉತ್ತಮ ಆಹಾರವನ್ನ ಸೇವನೆ ಮಾಡ್ರಿ ದೇಹವನ್ನು ಗಟ್ಟಿಗೊಳಿಸಿರಿ ಎಂದು ದಿನಾಂಕ 19/ 9/ 20 26 ರಂದು ರಾಯಚೂರು ತಾಲೂಕಿನ ಸರಕಾರಿ ಪ್ರೌಢ ಶಾಲೆ ಉಡಾಮಗಲ್ ಖಾನಾಪುರದಲ್ಲಿ ಶಿಕ್ಷಣ ಇಲಾಖೆಯ ಸುತ್ತೋಲೆಯಂತೆ .ಸಂಭ್ರಮ ಶನಿವಾರ ವಿಷಯವಾದ .ಪೌಷ್ಟಿಕತೆ. ಸ್ವಾಸ್ಥ್ಯ ಮತ್ತು ಶುಚಿತ್ವ ಪೋಷಣ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಲೆಯ ಕನ್ನಡ ಕಲಾ ಶಿಕ್ಷಕರು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ ಮಾತನಾಡಿದರು. ಶಾಲೆಯ ಮುಖ್ಯ ಗುರುಗಳಾದ ವೀರೇಶ್ ಅಂಗಡಿ ಮಾತನಾಡುತ್ತಾ ಈಗಾಗಲೇ ಡಾ. ಬಿರಾದಾರ್ ಸರ ಇದರ ಬಗ್ಗೆ ನಿಮಗೆ ವಿಡಿಯೋ ಮುಖಾಂತರ ತೋರಿಸಿ ವಿವರಣೆಯನ್ನು ನೀಡಿದ್ದಾರೆ. ಈ ಒಂದು ಕಾರ್ಯಕ್ರಮ ಶಿಕ್ಷಣ ಇಲಾಖೆಯ ಆದೇಶದಂತೆ ಇಂದು ನಮ್ಮ ಶಾಲೆಯಲ್ಲಿ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ವಿದ್ಯಾರ್ಥಿಗಳೇ ಬೇಕರಿ ಆಹಾರ ಪದಾರ್ಥ ಸೇವನೆಯಿಂದ ದೂರ ಇದ್ದು. ಮನೆಯಲ್ಲಿ ಮಾಡಿದ ಆಹಾರವನ್ನ ಸೇವನೆಯನ್ನು ಮಾಡಿರಿ. ದೇಹವನ್ನು ಮತ್ತು ಆರೋಗ್ಯವನ್ನು ಸ್ವಚ್ಛವಾಗಿ ಇಟ್ಟುಕೊಂಡು ಉತ್ತಮವಾಗಿ ಬೆಳೆಯಬೇಕೆಂದು ಹೇಳಿದರು. ಈ ಕಾರ್ಯಕ್ರಮವನ್ನು ಇಕೋ ಕ್ಲಬ್ ಸಹಕಾರದೊಂದಿಗೆ ಆಯೋಜನೆ ಮಾಡಲಾಗಿತ್ತು. ಇಕೋ ಕ್ಲಬ್ ಮುಖ್ಯಸ್ಥರಾದ ಶ್ರೀಮತಿ ಅನಿತಾ ಎನ್ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು .ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಿಬ್ಬಂದಿಯವರು ಉಪಸ್ಥಿತರಿದ್ದರು

ಮನಸ್ಸನ್ನು ಅರಿತುಕೊಳ್ಳುವುದು ಮಾನಸಿಕ ಆರೋಗ್ಯದ ಮೊದಲ ಹೆಜ್ಜೆ: ಯೋಗೇಶ್ ಮಾಸ್ಟರ್

ಕಲಬುರಗಿ,ಸೆ.19-

ಇತರರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಆದರೆ ನಮ್ಮ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರಿತುಕೊಳ್ಳುವ ಪ್ರಯತ್ನವೇ ಮಾನಸಿಕ ಆರೋಗ್ಯದ ಪ್ರಮುಖ ಹೆಜ್ಜೆಯಾಗಿದೆ ಎಂದು ಸಾಹಿತಿ ಹಾಗೂ ಆಪ್ತ ಸಮಾಲೋಚಕ ಯೋಗೇಶ್ ಮಾಸ್ಟರ್ ಹೇಳಿದರು.

ನಗರದ ರೇಷ್ಮಿ ವಿದ್ಯಾಭವನದಲ್ಲಿ ಕಲಬುರಗಿ ಸಂವಾದ ಯುವ ಸಂಪನ್ಮೂಲ ಕೇಂದ್ರದ ವತಿಯಿಂದ ರೇಷ್ಮಿ ಶಿಕ್ಷಣ ಸಂಸ್ಥೆ ಮತ್ತು ಚಾರಿಟೇಬಲ್ ಟ್ರಸ್ಟ್ ಹಾಗೂ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ಯುವ ಮನೋತ್ಸವ ಮನಸ್ಸು ಮಾತನಾಡಲಿ, ನೋವು ಮಾಯವಾಗಲಿ ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.



ಯುವಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮೊದಲು ತಮ್ಮೊಳಗೆ ನಡೆಯುತ್ತಿರುವ ಭಾವನಾತ್ಮಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಬೇಕು. ಕೋಪ, ದುಃಖ, ಭಯ, ಆತಂಕ, ನಿರಾಶೆ ಹಾಗೂ ಒಂಟಿತನದಂತಹ ಭಾವನೆಗಳನ್ನು ಒತ್ತಿಹಾಕುವ ಬದಲು ಅವುಗಳನ್ನು ಗುರುತಿಸಿ ಅರ್ಥೈಸಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

''ನಾನು ಏನು ಅನುಭವಿಸುತ್ತಿದ್ದೇನೆ? ಈ ನೋವು ಏಕೆ ಉಂಟಾಗಿದೆ? ನನಗೆ ನಿಜವಾಗಿ ಏನು ಬೇಕು?'' ಎಂಬ ಪ್ರಶ್ನೆಗಳನ್ನು ನಮ್ಮೊಳಗೆ ನಾವೇ ಕೇಳಿಕೊಳ್ಳುವ ಅಭ್ಯಾಸ ಬೆಳೆಸಿಕೊಂಡರೆ ಸ್ವಯಂ ಅರಿವು ಹೆಚ್ಚುತ್ತದೆ. ಸ್ವಯಂ ಅರಿವು ಹೆಚ್ಚಿದಂತೆ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವೂ ವೃದ್ಧಿಸುತ್ತದೆ ಎಂದು ತಿಳಿಸಿದರು.

ಇತರರ ವರ್ತನೆಗೆ ತಕ್ಷಣವೇ ಅರ್ಥ ಕಲ್ಪಿಸುವುದು ಅಥವಾ ಅವರು ನಮ್ಮ ಬಗ್ಗೆ ಏನು ಯೋಚಿಸುತ್ತಿದ್ದಾರೆ ಎಂದು ಊಹಿಸುವುದು ಅನೇಕ ಬಾರಿ ತಪ್ಪು ಗ್ರಹಿಕೆಗಳಿಗೆ ಕಾರಣವಾಗುತ್ತದೆ. ಪ್ರತಿಯೊಬ್ಬರ ಅನುಭವ ಮತ್ತು ಮನಸ್ಥಿತಿ ವಿಭಿನ್ನವಾಗಿರುವುದರಿಂದ ಮೊದಲು ನಮ್ಮ ಭಾವನೆಗಳನ್ನು ಗುರುತಿಸಿ ನಂತರ ಇತರರೊಂದಿಗೆ ಸಂವಹನ ನಡೆಸುವುದು ಅಗತ್ಯ ಎಂದು ಹೇಳಿದರು.

ಮಾನಸಿಕ ಸಮಸ್ಯೆಗಳನ್ನು ಮುಚ್ಚಿಡುವುದು ಅಥವಾ ಏಕಾಂಗಿಯಾಗಿ ಎದುರಿಸುವುದಕ್ಕಿಂತ ವಿಶ್ವಾಸಾರ್ಹ ವ್ಯಕ್ತಿಗಳೊಂದಿಗೆ ಮಾತನಾಡಬೇಕು. ಅಗತ್ಯವಿದ್ದಲ್ಲಿ ಆಪ್ತ ಸಮಾಲೋಚಕರು ಅಥವಾ ಮಾನಸಿಕ ಆರೋಗ್ಯ ತಜ್ಞರ ನೆರವು ಪಡೆಯಬೇಕು. ಸಹಾಯ ಕೇಳುವುದು ದುರ್ಬಲತೆಯಲ್ಲ ಎಂಬ ಮನೋಭಾವ ಯುವಜನರಲ್ಲಿ ಬೆಳೆಯಬೇಕು ಎಂದು ಯೋಗೇಶ್ ಮಾಸ್ಟರ್ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯ ಮತ್ತು ಯುವಜನರ ಸಮಕಾಲೀನ ಸವಾಲುಗಳು, ಯುವಜನರು ಮತ್ತು ಖಿನ್ನತೆ, ಆತ್ಮಹತ್ಯೆ ಕುರಿತು ಒಂದು ಕಣ್ಣೋಟ ವಿಷಯಗಳ ಕುರಿತು ವಿಚಾರ ಸಂಕಿರಣ ನಡೆಯಿತು. ಸಂವಾದ ಒಡನಾಡಿಗಳಿಂದ ಅನುಭವ ಹಂಚಿಕೆ, ಭಾಷಣ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರಮಾಣಪತ್ರ ಮತ್ತು ಬಹುಮಾನ ವಿತರಣೆ ಸಹ ನಡೆಯಿತು. ಸಂವಾದ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಮಹದೇವ ಮೂಲಗೆ ಶ್ಲಾಘಿಸಿದರು. ಶರಣೇಶ್ವರಿ ರೇಷ್ಮೆ ಮಹಿಳಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಗೀತಾ ಆರ್.ಎಂ. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಯಾನ ಮತ್ತು ಬದುಕು ಕಮ್ಯುನಿಟಿ ಕಾಲೇಜು ಹಾಗೂ ಸಂವಾದ ಸಂಸ್ಥೆಯ ಕಾರ್ಯಕ್ರಮ ನಿರ್ದೇಶಕ ಡಾ. ಮುರಳಿ ಮೋಹನ್ ಕಾಟಿ, ಸಂಸ್ಥೆಯ ಪ್ರೋಗ್ರಾಂ ಲೀಡ್ ಇಳಂಗೋ ಸ್ಟಾನಿಸ್ಲಾಸ್, ಪೀಪಲ್ ವಿತ್ ಡಿಸೆಬಿಲಿಟಿ ಸಂಸ್ಥೆಯ ಅಲ್ಪಾದೇ ವಿದಾಸ್, ಸಂವಾದ ಕೇಂದ್ರದ ನಾಗೇಶ್ ಹರಳಯ್ಯಾ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಮಲ್ಲಿಕಾ ರ್ಜುನ ಸ್ವಾಗಿತಿಸಿದ್ದರು. ಕೀರ್ತಿ ನಿರೂಪಿಸಿದ್ದರು. ರಾಜಶೇಖರ ವಂದಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಅಮೆರಿಕ ದಾದಾಗಿರಿಗೆ ಮೋದಿ ಮೌನ- ರಾಜತಾಂತ್ರಿಕತೆಯಲ್ಲ, ಶರಣಾಗತಿ!

ಅಮೆರಿಕ ಜೊತೆಗಿನ ಭಾರತದ ನಂಟು 'ಸಮಾನ ಸಾರ್ವಭೌಮತ್ವ'ದ ಮೇಲೆ ಆಧಾರಿತವಾಗಿರಬೇಕೇ ಹೊರತು, 'ಒಡೆಯ-ಗುಲಾಮ'ನ ಬಾಂಧವ್ಯದ ಮೇಲಲ್ಲ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಮತ್ತು ಬೆಳೆಯುತ್ತಿರುವ ಬೃಹತ್ ಆರ್ಥಿಕ ಶಕ್ತಿ. ಅಮೆರಿಕದ ದಬ್ಬಾಳಿಕೆಯನ್ನು ಸಹಿಸಿಕೊಂಡು ಮೌನವಾಗಿದ್ದರೆ ಜಾಗತಿಕ ಮಟ್ಟದಲ್ಲಿ ಭಾರತದ ಆಶಯಗಳಿಗೆ ಬೆಲೆ-ನೆಲೆ ಇಲ್ಲದಂತಾಗುತ್ತದೆ.

ಜಾಗತಿಕ ರಾಜಕಾರಣದಲ್ಲಿ ಅಮೆರಿಕ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಹೊರಟಾಗಲೆಲ್ಲ, ಸಾರ್ವಭೌಮ ದೇಶಗಳ ಮೇಲೆ ನಿರ್ಬಂಧಗಳ ಚಾಟಿ ಬೀಸುವುದು ಅದರ ಹಳೆಯ ಅಭ್ಯಾಸ. ಈಗಲೇ ತನ್ನ ದಬ್ಬಾಳಿಕೆಯನ್ನು ಮುಂದುವರೆಸುತ್ತಿರುವ ಅಮೆರಿಕ, ಲಿಂಡ್ಸೆ ಒ. ಗ್ರಹಾಂ ರಷ್ಯಾ ಮತ್ತು ಇರಾನ್ ನಿರ್ಬಂಧ ಕಾಯ್ದೆ-2026ನ್ನು ಸಂಸತ್ತಿನಲ್ಲಿ ಅಂಗೀಕರಿಸಿದೆ. ರಷ್ಯಾದಿಂದ ಕಚ್ಚಾ ತೈಲ ಮತ್ತು ಅನಿಲವನ್ನು ಆಮದು ಮಾಡಿಕೊಳ್ಳುತ್ತಿರುವ ಭಾರತ ಮತ್ತು ಚೀನಾದಂತಹ ದೇಶಗಳ ಮೇಲೆ 100%ರಷ್ಟು ಸುಂಕ ಹೇರುವ ಅಧಿಕಾರವನ್ನು ಅಧ್ಯಕ್ಷ ಟ್ರಂಪ್‌ಗೆ ನೀಡಿದೆ. ಇದು ಅಮೆರಿಕದ ಅತ್ಯಂತ ಬೇಜವಾಬ್ದಾರಿ, ಏಕಪಕ್ಷೀಯ ಹಾಗೂ ಹೆದರಿಸಿ ಬೆದರಿಸುವ ದಾದಾಗಿರಿ ನೀತಿ.

ಆದರೆ, ಅಮೆರಿಕದ ಈ ದುಂಡಾವರ್ತನೆಗೆ ಭಾರತ ಸರ್ಕಾರ ಅರ್ಥಾತ್ ಮೋದಿ ಸರ್ಕಾರ ತಲೆಬಾಗುತ್ತಿರುವುದು, ಮೌನವಾಗಿರುವುದು ಹಾಗೂ ಪ್ರಶ್ನಿಸಲು ಹಿಂಜರಿಯುತ್ತಿರುವುದು ಭಾರತೀಯರಿಗೆ ಕಳವಳ ಉಂಟುಮಾಡಿದೆ. 140 ಕೋಟಿ ಜನರ ಇಂಧನ ಭದ್ರತೆ ಮತ್ತು ದೇಶದ ಆರ್ಥಿಕ ಹಿತಾಸಕ್ತಿ ಆತಂಕದಲ್ಲಿರುವಾಗಲೂ ಪ್ರಧಾನಿ ಮೋದಿ ಅಮೆರಿಕದ ಮುಂದೆ ತಲೆ ಎತ್ತಿ ನಿಲ್ಲಲು ಯತ್ನಿಸುತ್ತಿಲ್ಲವೇಕೆ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಪ್ರಸ್ತುತ, ಭಾರತವು ತನ್ನ ಅಗತ್ಯದ 88%ಕ್ಕಿಂತ ಹೆಚ್ಚು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಈ ಆಮದಿನಲ್ಲಿ, ರಷ್ಯಾದ ಪಾಲು ಭಾರೀ (40ರಿಂದ 50%) ಪ್ರಮಾಣದಲ್ಲಿದೆ. ಮಧ್ಯಪ್ರಾಚ್ಯದಲ್ಲಿ ಸಾಲು ಸಾಲು ಯುದ್ಧಗಳು ಮತ್ತು ಜಲಸಂಧಿಗಳ ದಿಗ್ಬಂಧನಗಳಿಂದಾಗಿ ಜಾಗತಿಕ ತೈಲ ಪೂರೈಕೆ ಏರುಪೇರಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ರಷ್ಯಾದ ತೈಲ ಭಾರತದ ಇಂಧನ ಭದ್ರತೆಗೆ ಸಂಜೀವಿನಿಯಾಗಿದೆ.

ಮಧ್ಯಪ್ರಾಚ್ಯದಲ್ಲಿನ ಯುದ್ಧ ಮತ್ತು ಜಲಸಂಧಿಗಳ ಬಿಕ್ಕಟ್ಟನ್ನು ಸೃಷ್ಟಿಸಿದ್ದೇ ಅಮೆರಿಕ. ಆದರೂ, ತಾನೇ ರೂಪಿಸಿದ ಯುದ್ಧಗಳು ಮತ್ತು ಜಾಗತಿಕ ಬಿಕ್ಕಟ್ಟುಗಳಿಗೆ ಜಗತ್ತಿನ ಇತರೆ ದೇಶಗಳು ಬೆಲೆ ತೆರಬೇಕು ಎನ್ನುವುದು ಅಮೆರಿಕದ ಸಾಮ್ರಾಜ್ಯಶಾಹಿ ಮಾನಸಿಕತೆ. ಯುಕ್ರೇನ್ ಮತ್ತು ಮಧ್ಯಪ್ರಾಚ್ಯದ ಸಂಘರ್ಷಗಳಲ್ಲಿ ಭಾರತದ ಯಾವುದೇ ಪಾತ್ರವಿಲ್ಲ. ಸ್ವತಃ ಯುರೋಪ್ ದೇಶಗಳು ತಮ್ಮ ಇಂಧನ ಅಗತ್ಯಕ್ಕಾಗಿ ರಷ್ಯಾದ ನೈಸರ್ಗಿಕ ಅನಿಲವನ್ನು ಇಂದಿಗೂ ಬಳಸಿಕೊಳ್ಳುತ್ತಿವೆ. ಈಗ, ಭಾರತವೂ ತನ್ನ ಇಂಧನ ಕೊರತೆಯನ್ನು ನೀಗಿಸಿಕೊಳ್ಳಲು ರಷ್ಯಾ ಕಚ್ಚಾ ತೈಲದ ಮೇಲೆ ಅವಲಂಬಿಸಿದೆ. ಆದರೆ, ಟ್ರಂಪ್ ಅವರು ತಮ್ಮ ದೇಶದ ಮಧ್ಯಂತರ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಜಾಗತಿಕ ತೈಲ ಬೆಲೆ ಏರಿಕೆಯ ಒತ್ತಡವನ್ನು ಭಾರತದಂತಹ ದೇಶಗಳ ಮೇಲೆ ಹೇರಲು ಮುಂದಾಗಿದ್ದಾರೆ.

ರಷ್ಯಾದಿಂದ ಕಡಿಮೆ ದರದಲ್ಲಿ ತೈಲ ಖರೀದಿಸುವುದನ್ನು ನಿಲ್ಲಿಸಿ, ಅಮೆರಿಕದ ಶರತ್ತುಗಳಿಗೆ ಒಪ್ಪಿಕೊಳ್ಳುವಂತೆ ಭಾರತದ ಮೇಲೆ ಟ್ರಂಪ್ ಒತ್ತಡ ಹೇರುತ್ತಿದ್ದಾರೆ. ಇದು ಅಮೆರಿಕದ ನೇರ ಬೆದರಿಕೆ. ಬೆದರಿಕೆಯಷ್ಟೇ ಅಲ್ಲ, ಭಾರತದ ವ್ಯಾಪಾರ ಹಿತಾಸಕ್ತಿಗಳನ್ನು ಬಲಿ ಹಾಕುವ ಹುನ್ನಾರ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಲ್ಲಿ ಭಾರತವನ್ನು ಅಸಮಾನ ಸ್ಥಾನಕ್ಕೆ ತಳ್ಳಿ, ತನ್ನ ಕೃಷಿ ಮಾರುಕಟ್ಟೆ ಮತ್ತು ಸೇವಾ ವಲಯಗಳನ್ನು ನಿಯಂತ್ರಿಸುವುದು ಅಮೆರಿಕದ ನಿಜವಾದ ತಂತ್ರ. ಈ ಬಲೆಗೆ ಬೀಳುವುದು ದೇಶದ ಭವಿಷ್ಯಕ್ಕೆ ಕಂಟಕ.

ಇದೇ ಸಮಯದಲ್ಲಿ, ಮತ್ತೊಂದು ಕಹಿ ಸತ್ಯವನ್ನು ಪ್ರಧಾನಿ ಮೋದಿ ಸರ್ಕಾರ ಗ್ರಹಿಸಬೇಕಿದೆ. ರಷ್ಯಾದ ತೈಲವನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿರುವ ಪ್ರಥಮ ದೇಶ ಚೀನಾ, ಎರಡನೆಯದ್ದು ಭಾರತ. ಆದರೆ, ಅಮೆರಿಕವು ಚೀನಾದ ಮೇಲೆ ಇಂತಹ 100% ಸುಂಕ ಹೇರಲು ಹಿಂಜರಿಯುತ್ತದೆ. ಏಕೆಂದರೆ ಚೀನಾ ತಕ್ಷಣವೇ ತೀಕ್ಷ್ಣವಾಗಿ ಪ್ರತ್ಯುತ್ತರ ನೀಡುತ್ತದೆ ಎಂಬ ಭಯ ಅಮೆರಿಕಕ್ಕಿದೆ.

ಆದರೆ, ಭಾರತ ಯಾವುದೇ ಕಠಿಣ ಪ್ರತಿ-ಸುಂಕ ಅಥವಾ ರಾಜತಾಂತ್ರಿಕ ತಿರುಗೇಟು ನೀಡುವುದಿಲ್ಲ ಎಂಬ ಉಡಾಫೆ ಅಮೆರಿಕಕ್ಕಿದೆ. ನಾವು ಅಮೆರಿಕದ ಪ್ರತಿಯೊಂದು ದೌರ್ಜನ್ಯಕ್ಕೂ ತಲೆಬಾಗುತ್ತಾ ಹೋದರೆ, ಕತ್ತಲೆಯ ಕೋಣೆಯಲ್ಲಿ ನಮ್ಮನ್ನಿಟ್ಟು ಅಮೆರಿಕ ನಿರಂತರವಾಗಿ ಬೆದರಿಸುತ್ತಲೇ ಇರುತ್ತದೆ. ಕೆನಡಾದಂತಹ ಸಣ್ಣ ದೇಶಗಳೇ ಅಮೆರಿಕದ ಸುಂಕ ನೀತಿಯ ವಿರುದ್ಧ ಪ್ರತಿ-ಸುಂಕ ವಿಧಿಸಿ ಎದೆಸೆಟೆದು ನಿಲ್ಲುತ್ತಿರುವಾಗ, 140 ಕೋಟಿ ಜನರ ಭಾರತ ಏತಕ್ಕಾಗಿ ಹಿಂಜರಿಯಬೇಕು?

ಅಮೆರಿಕದ ಕಾಯ್ದೆಯಲ್ಲಿ ವಿಶೇಷ ವಿನಾಯಿತಿ ಪಡೆಯಲು ಭಾರತ ಭಿಕ್ಷೆ ಬೇಡುವ ಅಗತ್ಯವೇನೂ ಇಲ್ಲ. ಯಾಕೆಂದರೆ, ಅಮೆರಿಕದ ದಬ್ಬಾಳಿಕೆ-ದಾದಾಗಿರಿಗೆ ಈ ಹಿಂದೆ ಭಾರತ ತೀಕ್ಷ್ಣವಾಗಿಯೇ ಪ್ರತಿಕ್ರಿಯಿಸಿದ ಮತ್ತು ಪ್ರತ್ಯುತ್ತರ ನೀಡಿದ ಉದಾಹರಣೆಗಳಿವೆ.

1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಮತ್ತು ಗೃಹ ಕಾರ್ಯದರ್ಶಿ ಹೆನ್ರಿ ಕಿಸ್ಸಿಂಜರ್ ಅವರು ಭಾರತವನ್ನು ನಾನಾ ರೀತಿಯಲ್ಲಿ ಬೆದರಿಸಿದ್ದರು. ಅಮೆರಿಕವು ತನ್ನ ಏಳನೇ ನೌಕಾಪಡೆಯನ್ನು ಬಂಗಾಳ ಕೊಲ್ಲಿಗೆ ಕಳುಹಿಸಿ ಭಾರತಕ್ಕೆ ನೇರ ಯುದ್ಧದ ಬೆದರಿಕೆ ಒಡ್ಡಿತ್ತು. ಅಂತಹ ಸಂದರ್ಭದಲ್ಲಿಯೂ, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಎಳ್ಳಷ್ಟೂ ಹಿಂಜರಿಯಲಿಲ್ಲ. ವೈಯಕ್ತಿಕ ದಾಳಿಗಳು, ಆರ್ಥಿಕ ತಡೆಗಳು ಹಾಗೂ ನೌಕಾಪಡೆಯ ಬೆದರಿಕೆಗಳನ್ನು ಮೆಟ್ಟಿನಿಂತು, ರಷ್ಯಾದೊಂದಿಗೆ ಗಟ್ಟಿಯಾದ ಮೈತ್ರಿ ಬೆಳೆಸಿ, ಅಮೆರಿಕದ ಬೆದರಿಕೆಗೆ ಬಗ್ಗದೆ ತಮ್ಮತನ ತೋರಿದ್ದರು. ಆ ಮೂಲಕ ಜಗತ್ತಿನ ಸೂಪರ್ ಪವರ್ ದೇಶಕ್ಕೆ ಭಾರತದ ಅಸಲಿ ಸಾರ್ವಭೌಮತ್ವದ ರುಚಿ ತೋರಿಸಿದ್ದರು.

ಆದರೆ, ಇಂದಿನ ಮೋದಿ ಸರ್ಕಾರ ಅಮೆರಿಕದ ಪ್ರತಿಯೊಂದು ನಿಯಮಕ್ಕೂ, ನಿರ್ಬಂಧಕ್ಕೂ ಹೆದರಿ, ಒಳಗೊಳಗೇ ಒಪ್ಪಂದ ಮಾಡಿಕೊಳ್ಳಲು ಯತ್ನಿಸುತ್ತಿದೆ. 140 ಕೋಟಿ ಜನರ ಇಂಧನ ಭದ್ರತೆ ನಮ್ಮ ಹಕ್ಕು ಎಂದು ವಿದೇಶಾಂಗ ಸಚಿವರು ನೀಡುವ ಹೇಳಿಕೆಗಳು ಕೇವಲ ಪತ್ರಿಕಾ ಪ್ರಕಟಣೆಗಳಿಗೆ ಸೀಮಿತವಾಗಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಮಾತ್ರ ಅಮೆರಿಕದ ಕಾಯ್ದೆಗಳು ಅನಧಿಕೃತ ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ಬಾಹಿರ. ವಿಶ್ವಸಂಸ್ಥೆ ವಿಧಿಸದ ಯಾವುದೇ ಏಕಪಕ್ಷೀಯ ನಿರ್ಬಂಧಗಳನ್ನು ಭಾರತ ಮಾನ್ಯ ಮಾಡುವುದಿಲ್ಲ, ನಮಗೆ ನಮ್ಮ ದೇಶದ ಹಿತಾಸಕ್ತಿಯೇ ಅಂತಿಮ ಎಂದು ಹೇಳುವ ಧೈರ್ಯ ತೋರುತ್ತಿಲ್ಲ.

ಪ್ರಧಾನಿ ಮೋದಿ ಅವರ ವಿಶ್ವಗುರು ಎಂಬ ಬಿರುದು ಮತ್ತು ಅಂತಾರಾಷ್ಟ್ರೀಯ ವರ್ಚಸ್ಸು ಕೇವಲ ಚುನಾವಣಾ ಪ್ರಚಾರದ ಭಾಷಣಗಳಿಗೆ ಸೀಮಿತವಾಗಿವೆ. ಅಮೆರಿಕದ ಅಧ್ಯಕ್ಷರ ಮುಂದೆ ಕಣ್ಣಲ್ಲಿ ಕಣ್ಣಿಟ್ಟು ಭಾರತದ ಸ್ವಾಯತ್ತತೆಯನ್ನು ಸಮರ್ಥಿಸಿಕೊಳ್ಳಲು ಮೋದಿ ಅವರು ಹಿಂಜರಿಯುತ್ತಿದ್ದಾರೆ. ಅವರ ಈ ಮೌನ ದೇಶದ ಇಂಧನ ಭದ್ರತೆಗೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿದೆ.

ಮೋದಿ ಸರ್ಕಾರ ಮಣಿದಂತೆಲ್ಲ, ಅಮೆರಿಕ ಮತ್ತಷ್ಟು ನಿರ್ಬಂಧ, ಸುಂಕದಂತಹ ಬೆದರಿಕೆಗಳನ್ನು ಒಡ್ಡುತ್ತಲೇ ಇದೆ. ಪ್ರಧಾನಿ ಮೋದಿ ಅವರ 56 ಇಂಚಿನ ಎದೆ ಮತ್ತು ಅದರೊಳಗಿನ ಧೈರ್ಯದ ಬಗ್ಗೆ ಭಾರತೀಯರಲ್ಲಿ ಮತ್ತೆ ಮತ್ತೆ ಪ್ರಶ್ನೆಗಳು ಹುಟ್ಟುತ್ತಲೇ ಇವೆ. ಜಾಗತಿಕ ಇಂಧನ ಬಿಕ್ಕಟ್ಟು ಎದುರಾಗಿರುವ ಈ ಸಂದರ್ಭದಲ್ಲಾದರೂ, ಅಮೆರಿಕ ಎದುರು ಮೋದಿ ಅವರು ತನ್ನ 56 ಇಂಚಿನ ಎದೆಯನ್ನು ಸೆಟೆಸಿ ನಿಲ್ಲಬೇಕು. ಅಮೆರಿಕದ ಸಂಸದೀಯ ಬೆದರಿಕೆಗೆ ತಲೆಬಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು.

ಅಮೆರಿಕದ ಕಾಯ್ದೆಯನ್ನು ಬದಿಗೊತ್ತಿ, ದೇಶದ ಜನರಿಗೆ ಕೈಗೆಟುಕುವ ದರದಲ್ಲಿ ಇಂಧನ ಸಿಗಲು ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಮುಂದುವರಿಸಬೇಕು. ಅಮೆರಿಕವು ಭಾರತೀಯ ಉತ್ಪನ್ನಗಳ ಮೇಲೆ ಅಕ್ರಮ ಸುಂಕ ಹೇರಿದರೆ, ಭಾರತವೂ ಕೂಡ ಅಮೆರಿಕದಿಂದ ಬರುವ ಉತ್ಪನ್ನಗಳ ಮೇಲೆ ತಕ್ಷಣವೇ ಪ್ರತಿ-ಸುಂಕ ವಿಧಿಸಲಿದೆ ಎಂಬ ಖಡಕ್ ಸಂದೇಶ ರವಾನಿಸಬೇಕು. ಬ್ರಿಕ್ಸ್ ಮತ್ತು ಇತರ ಜಾಗತಿಕ ವೇದಿಕೆಗಳಲ್ಲಿ ಡಾಲರ್ ಅಧಿಪತ್ಯಕ್ಕೆ ಪರ್ಯಾಯವಾಗಿ ರೂಪಾಯಿ-ರೂಬಲ್ ಮತ್ತು ಸ್ಥಳೀಯ ಕರೆನ್ಸಿಗಳ ಮೂಲಕ ವ್ಯಾಪಾರ ಮಾಡುವ ಪ್ರಕ್ರಿಯೆಗೆ ತೊಡಬೇಕು. ಭಾರತದ ಕೃಷಿ ಮತ್ತು ಮಾರುಕಟ್ಟೆಯನ್ನು ಹಾಳುಮಾಡುವ ಅಮೆರಿಕದ ಏಕಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದದಿಂದ ಹೊರಬರಬೇಕು.

ದೇಶದ ಹಿತಾಸಕ್ತಿ ವಿಚಾರದಲ್ಲಿ ತಲೆಬಾಗುವುದು ರಾಜತಾಂತ್ರಿಕತೆಯಲ್ಲ, ಅದು ಶರಣಾಗತಿ! ಅಮೆರಿಕ ಜೊತೆಗಿನ ಭಾರತದ ನಂಟು ಸಮಾನ ಸಾರ್ವಭೌಮತ್ವದ ಮೇಲೆ ಆಧಾರಿತವಾಗಿರಬೇಕೇ ಹೊರತು, ಒಡೆಯ-ಗುಲಾಮನ ಬಾಂಧವ್ಯದ ಮೇಲಲ್ಲ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಮತ್ತು ಬೆಳೆಯುತ್ತಿರುವ ಬೃಹತ್ ಆರ್ಥಿಕ ಶಕ್ತಿ. ಅಮೆರಿಕದ ದಬ್ಬಾಳಿಕೆಯನ್ನು ಸಹಿಸಿಕೊಂಡು ಮೌನವಾಗಿದ್ದರೆ ಜಾಗತಿಕ ಮಟ್ಟದಲ್ಲಿ ಭಾರತದ ಆಶಯಗಳಿಗೆ ಬೆಲೆ-ನೆಲೆ ಇಲ್ಲದಂತಾಗುತ್ತದೆ. ಪ್ರಧಾನಿ ನರೇಂದ್ರ ಮೋದಿಯವರು ತಕ್ಷಣವೇ ತಮ್ಮ ಅಸ್ಪಷ್ಟ ನಿಲುವನ್ನು ಬಿಟ್ಟು, ಖಡಕ್ ನಾಯಕತ್ವ ಮತ್ತು ರಾಷ್ಟ್ರೀಯ ಸ್ವಾಭಿಮಾನವನ್ನು ಪ್ರದರ್ಶಿಸಬೇಕು.

ಟಾಟಾ ಸನ್ಸ್ ಬೋರ್ಡ್ ರೂಮ್ ಕಲಹದ ಆಳ ಅಗಲವೇನು ಬಲ್ಲಿರಾ?

ಭಾರತದ ಭಾರೀ ಉದ್ಯಮ ಬ್ರ್ಯಾಂಡ್‌ಗಳಲ್ಲಿ ಒಂದು ಟಾಟಾ. ಉಪ್ಪಿನಿಂದ ಹಿಡಿದು ಉಕ್ಕು, ಕಾರು, ಐಟಿ, ಹೋಟೆಲ್, ವಿಮಾನಯಾನ, ಎಲೆಕ್ಟ್ರಿಕ್ ವಾಹನ, ಈಗ ಸೆಮಿಕಂಡಕ್ಟರ್‌ವರೆಗೆ ಟಾಟಾ ಸಾಮ್ರಾಜ್ಯ ವ್ಯಾಪಿಸಿದೆ.

ಆದರೆ, ಈಗ ಇದೇ ಟಾಟಾ ಸಾಮ್ರಾಜ್ಯದ ಅತ್ಯುನ್ನತ ಮಟ್ಟದಲ್ಲಿ ದೊಡ್ಡ ಬೋರ್ಡ್‌ರೂಂ ಸಂಘರ್ಷ ನಡೆಯುತ್ತಿದೆ.

ಒಂದು ಕಡೆ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್. ಇನ್ನೊಂದು ಕಡೆ ಟಾಟಾ ಟ್ರಸ್ಟ್ ಅಧ್ಯಕ್ಷ ಹಾಗೂ ರತನ್ ಟಾಟಾ ಅವರ ಕುಟುಂಬದ ಸದಸ್ಯ ನೋಯೆಲ್ ಟಾಟಾ.



ಈ ಸಂಘರ್ಷಕ್ಕೆ ಪ್ರಮುಖವಾಗಿ ಎರಡು ಕಾರಣಗಳಿವೆ.

ಮೊದಲನೆಯದುಚಂದ್ರಶೇಖರನ್ ಅವರ ಅಧಿಕಾರಾವಧಿಯನ್ನು ಇನ್ನೂ ಐದು ವರ್ಷ ವಿಸ್ತರಿಸುವುದೇ?

ಎರಡನೆಯದುಟಾಟಾ ಸನ್ಸ್ ನ್ನು ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಮಾಡಬೇಕೇ?

ಈ ಎರಡೂ ಪ್ರಶ್ನೆಗಳು ಈಗ ಟಾಟಾ ಗ್ರೂಪ್‌ನ ಭವಿಷ್ಯದ ದಿಕ್ಕನ್ನೇ ನಿರ್ಧರಿಸುವ ಮಟ್ಟಕ್ಕೆ ಹೋಗಿವೆ.

ಟಾಟಾ ಸನ್ಸ್ ಬೋರ್ಡ್‌ನಲ್ಲಿ ಚಂದ್ರಶೇಖರನ್ ಅವರ ಅಧಿಕಾರಾವಧಿಯನ್ನು ಐದು ವರ್ಷ ವಿಸ್ತರಿಸುವ ಪ್ರಸ್ತಾವ ಬಂದಾಗ ನಿರ್ದೇಶಕರು ಬಹುಮತದಿಂದ ಬೆಂಬಲಿಸಿದರು. ಆದರೆ ನೋಯೆಲ್ ಟಾಟಾ ವಿರೋಧಿಸಿದರು. ಚಂದ್ರಶೇಖರನ್ ಸ್ವತಃ ಮತದಾನದಲ್ಲಿ ಪಾಲ್ಗೊಂಡಿಲ್ಲ.

ಇಲ್ಲಿ ಕುತೂಹಲಕಾರಿ ಸಂಗತಿ ಏನೆಂದರೆ, ಇದೇ ಚಂದ್ರಶೇಖರನ್ ಆಗಸ್ಟ್ 12ರಂದು ತಮ್ಮ ಅವಧಿ ಫೆಬ್ರವರಿಯಲ್ಲಿ ಮುಗಿದ ನಂತರ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವುದಾಗಿ ಘೋಷಿಸಿದ್ದರು.

ಹಾಗಾದರೆ ಕೆಲವೇ ವಾರಗಳಲ್ಲಿ ಪರಿಸ್ಥಿತಿ ಹೇಗೆ ಬದಲಾಯಿತು? ಇದೇ ಈಗ ದೊಡ್ಡ ಪ್ರಶ್ನೆ. ಟಾಟಾ ಟ್ರಸ್ಟ್ ಈ ಮತದಾನವನ್ನೇ ಪ್ರಶ್ನಿಸಿದೆ.

ಕಂಪನಿಯ ಪ್ರಕಾರ ಕೆಲವು ಪ್ರಮುಖ ನಿರ್ಧಾರಗಳಿಗೆ ಟಾಟಾ ಟ್ರಸ್ಟ್ ನಾಮನಿರ್ದೇಶಿತ ನಿರ್ದೇಶಕರ ಒಪ್ಪಿಗೆ ಅಗತ್ಯ ಎಂಬುದು ಟ್ರಸ್ಟ್‌ಗಳ ವಾದ.

ನೋಯೆಲ್ ಟಾಟಾ ಈ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾದ ಸಾಧ್ಯತೆ ಇದೆ ಎಂದು ಬೋರ್ಡ್ ಸಭೆಯಲ್ಲೇ ಎಚ್ಚರಿಸಿದ್ದಾರೆ ಎನ್ನಲಾಗಿದೆ.

ಆದರೆ, ಇದು ಕೇವಲ ಚಂದ್ರಶೇಖರನ್ ಅವರ ಹುದ್ದೆಯ ವಿಚಾರವಲ್ಲ. ಇನ್ನೂ ದೊಡ್ಡ ಸಂಘರ್ಷ ಟಾಟಾ ಸನ್ಸ್ ಲಿಸ್ಟಿಂಗ್ ಕುರಿತು ನಡೆಯುತ್ತಿದೆ.

ಟಾಟಾ ಗ್ರೂಪ್‌ನ ಬಹುತೇಕ ಪ್ರಮುಖ ಕಂಪನಿಗಳು ಈಗಾಗಲೇ ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿವೆ. ಆದರೆ ಇಡೀ ಸಮೂಹದ ಹೋಲ್ಡಿಂಗ್ ಕಂಪನಿಯಾದ ಟಾಟಾ ಸನ್ಸ್ ಮಾತ್ರ ಲಿಸ್ಟ್ ಆಗಿಲ್ಲ. ಟಾಟಾ ಸನ್ಸ್ ನಲ್ಲಿ ಸುಮಾರು 66 ಶೇಕಡಾ ಷೇರುಗಳು ಟಾಟಾ ಟ್ರಸ್ಟ್ ಬಳಿ ಇವೆ.

ಅಂದರೆ ಟಾಟಾ ಸನ್ಸ್ ಮೇಲಿನ ನಿಜವಾದ ನಿಯಂತ್ರಣ ಬಹುಪಾಲು ಈ ದತ್ತಿ ಟ್ರಸ್ಟ್‌ಗಳ ಕೈಯಲ್ಲಿದೆ.

ಈಗ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳ ಕಾರಣ ಟಾಟಾ ಸನ್ಸ್ ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಬೇಕಾದ ಒತ್ತಡ ಎದುರಿಸುತ್ತಿದೆ. ಲಿಸ್ಟಿಂಗ್‌ನಿಂದ ವಿನಾಯಿತಿ ನೀಡುವಂತೆ ಟಾಟಾ ಸನ್ಸ್ ಕೇಳಿಕೊಂಡಿದ್ದರೂ, ಆ ಮನವಿಯನ್ನು ಆರ್‌ಬಿಐ ತಿರಸ್ಕರಿಸಿದೆ ಎಂದು ವರದಿಯಾಗಿದೆ.

ಇದರಿಂದ ಬೋರ್ಡ್ ಲಿಸ್ಟಿಂಗ್‌ಗೆ ಅಗತ್ಯ ಕ್ರಮಗಳ ಕುರಿತು ಚರ್ಚೆ ಆರಂಭಿಸಿದೆ. ಆದರೆ ನೋಯೆಲ್ ಟಾಟಾ ಇದಕ್ಕೂ ವಿರೋಧ ವ್ಯಕ್ತಪಡಿಸಿದ್ದಾರೆ.

ಏಕೆ?

ಟಾಟಾ ಟ್ರಸ್ಟ್ ಹೇಳುವುದೇನೆಂದರೆ, ಟಾಟಾ ಸನ್ಸ್ ಕೇವಲ ಒಂದು ಸಾಮಾನ್ಯ ಹೋಲ್ಡಿಂಗ್ ಕಂಪನಿ ಅಲ್ಲ. ಇದರ ಮಾಲೀಕತ್ವ ಮತ್ತು ಆಡಳಿತ ವ್ಯವಸ್ಥೆ ನೂರು ವರ್ಷಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದೆ. ಕಂಪನಿ ಷೇರು ಮಾರುಕಟ್ಟೆಗೆ ಬಂದರೆ ಸಾರ್ವಜನಿಕ ಹೂಡಿಕೆದಾರರು ಬರುತ್ತಾರೆ. ಹೆಚ್ಚು ಪಾರದರ್ಶಕತೆ ಅಗತ್ಯವಾಗುತ್ತದೆ. ಪ್ರತಿ ದೊಡ್ಡ ನಿರ್ಧಾರಕ್ಕೂ ಮಾರುಕಟ್ಟೆಯ ಪ್ರತಿಕ್ರಿಯೆ ಎದುರಾಗುತ್ತದೆ. ಲಾಭ ಮತ್ತು ಷೇರುದಾರರ ಮೌಲ್ಯ ಹೆಚ್ಚಿಸುವ ಒತ್ತಡವೂ ಹೆಚ್ಚಾಗಬಹುದು.

ಟಾಟಾ ಟ್ರಸ್ಟ್ ಆತಂಕವೇನೆಂದರೆ, ಇದರಿಂದ ಟಾಟಾ ಗ್ರೂಪ್‌ನ ದೀರ್ಘಕಾಲದ ಸಾಮಾಜಿಕ ಮತ್ತು ದತ್ತಿ ಕೇಂದ್ರಿತ ಮಾದರಿಯೇ ಬದಲಾಗಬಹುದು.

ಇನ್ನೊಂದೆಡೆ ಲಿಸ್ಟಿಂಗ್ ಪರವಾದ ವಾದವೂ ಇದೆ. ಲಿಸ್ಟ್ ಆದರೆ ಟಾಟಾ ಸನ್ಸ್ ಗೆ ಹೊಸದಾಗಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಸಂಗ್ರಹಿಸಲು ಅವಕಾಶ ಸಿಗಬಹುದು. ಜಾಗತಿಕ ಹೂಡಿಕೆದಾರರು ನೇರವಾಗಿ ಹೂಡಿಕೆ ಮಾಡಬಹುದು. ಕಂಪನಿಯ ಕಾರ್ಯಾಚರಣೆ ಹೆಚ್ಚು ಪಾರದರ್ಶಕವಾಗಬಹುದು.

ಅದರ ಮೌಲ್ಯ ಎಷ್ಟು?

ಕೆಲವು ವಿಶ್ಲೇಷಕರ ಅಂದಾಜು ಪ್ರಕಾರ ಟಾಟಾ ಸನ್ಸ್ ಲಿಸ್ಟ್ ಆದರೆ ಅದರ ಮೌಲ್ಯ 120 ಶತಕೋಟಿ ಡಾಲರ್‌ಗಳಿಗಿಂತ (1.52 ಲಕ್ಷ ಕೋಟಿ ರುಪಾಯಿಗಳು) ಹೆಚ್ಚಾಗಬಹುದು. ಅಂದರೆ ಇದು ಭಾರತದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಆಗುವ ಸಾಧ್ಯತೆ ಇದೆ.

ಆದರೆ ಇಂತಹ ಲಿಸ್ಟಿಂಗ್ ಟಾಟಾ ಗ್ರೂಪ್‌ನ ಅಧಿಕಾರ ಸಮತೋಲನವನ್ನು ಸಂಪೂರ್ಣ ಬದಲಾಯಿಸಬಹುದು. ಇಲ್ಲಿಯೇ ನೋಯೆಲ್ ಟಾಟಾ ಮತ್ತು ಚಂದ್ರಶೇಖರನ್ ನಡುವಿನ ಭಿನ್ನಾಭಿಪ್ರಾಯಕ್ಕೆ ದೊಡ್ಡ ಅರ್ಥ ಸಿಗುತ್ತದೆ.

ಚಂದ್ರಶೇಖರನ್ ಯಾರು?

ಟಾಟಾ ಕುಟುಂಬದ ಹೊರಗಿನಿಂದ ಟಾಟಾ ಸನ್ಸ್ ನೇತೃತ್ವ ವಹಿಸಿದ ಮೊದಲ ವ್ಯಕ್ತಿ. ಟಿಸಿಎಸ್‌ನಲ್ಲಿ 30 ವರ್ಷ ಕೆಲಸ ಮಾಡಿದ ಅವರು, ಎಂಟು ವರ್ಷ ಆಗಿದ್ದರು. ರತನ್ ಟಾಟಾ ಅವರೇ ಅವರನ್ನು ಟಾಟಾ ಸನ್ಸ್ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡಿದ್ದರು. ಅವರ ಅಧಿಕಾರಾವಧಿಯಲ್ಲಿ ಟಾಟಾ ಗ್ರೂಪ್ ಎಲೆಕ್ಟ್ರಿಕ್ ವಾಹನ, ಐಫೋನ್ ತಯಾರಿಕೆ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಕ್ಷೇತ್ರಗಳಿಗೆ ದೊಡ್ಡ ಮಟ್ಟದಲ್ಲಿ ಕಾಲಿಟ್ಟಿದೆ. ಟಾಟಾ ಗ್ರೂಪ್‌ನ ಪ್ರಮುಖ ಕಂಪನಿಗಳ ಆದಾಯ ಮತ್ತು ಲಾಭವೂ ಅವರ ಅವಧಿಯಲ್ಲಿ ಗಣನೀಯವಾಗಿ ಹೆಚ್ಚಾಗಿದೆ.

ಆದರೆ ಕಳೆದ ಒಂದು ವರ್ಷ ಸುಲಭವಾಗಿರಲಿಲ್ಲ. ಏರ್ ಇಂಡಿಯಾಗೆ ಸಂಬಂಧಿಸಿದ ಗಂಭೀರ ಸಂಕಷ್ಟ, ಜಾಗ್ವಾರ್ ಲ್ಯಾಂಡ್ ರೋವರ್ ಮೇಲಿನ ಸೈಬರ್ ದಾಳಿ, ಎಐ ಕಾರಣದಿಂದ ಟಿಸಿಎಸ್ ವ್ಯವಹಾರ ಮಾದರಿಗೆ ಎದುರಾಗುತ್ತಿರುವ ಸವಾಲು ಮತ್ತು ಭಾರತದ ಸ್ವದೇಶಿ ಸೆಮಿಕಂಡಕ್ಟರ್ ಯೋಜನೆಯನ್ನು ಯಶಸ್ವಿಗೊಳಿಸುವ ಒತ್ತಡಇವೆಲ್ಲವೂ ಅವರ ಮುಂದಿವೆ.

ಇನ್ನೊಂದೆಡೆ ರತನ್ ಟಾಟಾ ಅವರ ನಿಧನದ ನಂತರ ಟಾಟಾ ಟ್ರಸ್ಟ್ ಅಧ್ಯಕ್ಷರಾದ ನೋಯೆಲ್ ಟಾಟಾ, ಸಮೂಹದ ಹಳೆಯ ಆಡಳಿತ ಮಾದರಿಯನ್ನು ಉಳಿಸಬೇಕೆಂಬ ನಿಲುವು ಹೊಂದಿದ್ದಾರೆ.

ಟಾಟಾ ಸನ್ಸ್ ಅಧ್ಯಕ್ಷ ಚಂದ್ರಶೇಖರನ್ ಮತ್ತು ಟಾಟಾ ಟ್ರಸ್ಟ್ ಅಧ್ಯಕ್ಷ ನೋಯೆಲ್ ಟಾಟಾ

ಹೀಗಾಗಿ ಇದು ಇಬ್ಬರು ವ್ಯಕ್ತಿಗಳ ವೈಯಕ್ತಿಕ ಸಂಘರ್ಷ ಮಾತ್ರವೇ? ಅಥವಾ ಟಾಟಾ ಗ್ರೂಪ್‌ನ ಭವಿಷ್ಯದ ಸ್ವರೂಪದ ಕುರಿತು ಎರಡು ವಿಭಿನ್ನ ದೃಷ್ಟಿಕೋನಗಳ ನಡುವಿನ ಸಂಘರ್ಷವೇ?

ಒಂದು ಕಡೆ ಮಾರುಕಟ್ಟೆ, ಬಂಡವಾಳ, ಪಾರದರ್ಶಕತೆ ಮತ್ತು ಜಾಗತಿಕ ವಿಸ್ತರಣೆ. ಇನ್ನೊಂದು ಕಡೆ ಟ್ರಸ್ಟ್‌ಗಳ ನಿಯಂತ್ರಣ, ದೀರ್ಘಕಾಲದ ಸ್ವಾಯತ್ತತೆ ಮತ್ತು ಟಾಟಾ ಸಮೂಹದ ವಿಶಿಷ್ಟ ಆಡಳಿತ ಪರಂಪರೆ. ಈ ಸಂಘರ್ಷ ಈಗ ನ್ಯಾಯಾಲಯದ ಕಟ್ಟೆ ಹತ್ತುವ ಸಾಧ್ಯತೆ ಇದೆ.

ಒಂದು ವೇಳೆ ಟಾಟಾ ಸನ್ಸ್ ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆದರೆ ಅದು ಭಾರತದ ಕಾರ್ಪೊರೇಟ್ ಇತಿಹಾಸದಲ್ಲೇ ಅತಿದೊಡ್ಡ ಬದಲಾವಣೆ ಎನಿಸಬಹುದು.

ಲಿಸ್ಟ್ ಆಗದೆ ಉಳಿದರೆ, ಆರ್‌ಬಿಐ ನಿರ್ದೇಶನವನ್ನು ಟಾಟಾ ಸನ್ಸ್ ಹೇಗೆ ಎದುರಿಸುತ್ತದೆ ಎಂಬ ಪ್ರಶ್ನೆ ಉಳಿಯುತ್ತದೆ. ಹಾಗೆಯೇ ಚಂದ್ರಶೇಖರನ್ ಅವರ ಅಧಿಕಾರಾವಧಿ ವಿಸ್ತರಣೆ ಕಾನೂನಾತ್ಮಕವಾಗಿ ಉಳಿಯುತ್ತದೆಯೇ ಎಂಬುದೂ ಮುಂದಿನ ಪ್ರಮುಖ ಪ್ರಶ್ನೆ.

150 ವರ್ಷಗಳ ಇತಿಹಾಸ ಹೊಂದಿರುವ ಟಾಟಾ ಸಾಮ್ರಾಜ್ಯ ಈಗ ಬಹುಶಃ ತನ್ನ ಅತ್ಯಂತ ಮಹತ್ವದ ತಿರುವಿನಲ್ಲಿದೆ.

ರತನ್ ಟಾಟಾ ನಂತರ ಟಾಟಾ ಗ್ರೂಪ್ ಯಾವ ದಿಕ್ಕಿನಲ್ಲಿ ಸಾಗಲಿದೆ? ಚಂದ್ರಶೇಖರನ್ ಅವರ ಕೈಯಲ್ಲೇ ಮುಂದುವರಿಯುತ್ತ'ದೆಯೇ? ಅಥವಾ ಟಾಟಾ ಟ್ರಸ್ಟ್ ತನ್ನ ನಿಯಂತ್ರಣವನ್ನು ಮತ್ತಷ್ಟು ಬಲಪಡಿಸುತ್ತದೆಯೇ?

ಟಾಟಾ ಸನ್ಸ್ ಕೊನೆಗೂ ಷೇರು ಮಾರುಕಟ್ಟೆಗೆ ಬರಲಿದೆಯೇ?

ಈ ಮೂರು ಪ್ರಶ್ನೆಗಳ ಉತ್ತರವೇ ಟಾಟಾ ಸಾಮ್ರಾಜ್ಯದ ಮುಂದಿನ ಅಧ್ಯಾಯವನ್ನು ನಿರ್ಧರಿಸಲಿದೆ.

ವಚನಕಾರರ ವೈಚಾರಿಕತೆಯಲ್ಲಿ ನಾಗರಪಂಚಮಿ



ನಾಗರಪಂಚಮಿ ನಮಗೆ ಒಂದು ಪ್ರಶ್ನೆಯನ್ನು ಕೇಳುತ್ತದೆ. ನಾವು ಪೂಜಿಸುವುದು ಕಲ್ಲಿನ ರೂಪವನ್ನೋ ಅಥವಾ ಅದರ ಮೂಲಕ ಜೀವದ ಮೌಲ್ಯವನ್ನು ಅರಿಯುವ ಸಂಸ್ಕೃತಿಯನ್ನೋ, ಬಸವಣ್ಣನವರ ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು, ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ ಎಂಬ ವಚನದ ವೈಚಾರಿಕ ಬೆಳಕಿನಲ್ಲಿ ನೋಡಿದಾಗ ಉತ್ತರ ಸ್ಪಷ್ಟವಾಗುತ್ತದೆ. ಆಚರಣೆಯ ಅಂತಿಮ ಗುರಿ ಮಾನವೀಯತೆ ಮತ್ತು ಪ್ರಾಣಿ ಪಕ್ಷಿಗಳ ಜೀವದಯೆಯಾಗಬೇಕು.

ಕರ್ನಾಟಕದ ಜನಪದ ಮತ್ತು ಧಾರ್ಮಿಕ ಸಂಸ್ಕೃತಿಯಲ್ಲಿ ಮಹತ್ವದ ಹಬ್ಬವಾಗಿರುವ ನಾಗರಪಂಚಮಿ, ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ನಾಗದೇವತೆಯನ್ನು ಪೂಜಿಸುವ ಸಂಪ್ರದಾಯ ಹಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ನಾಗನನ್ನು ಪ್ರಕೃತಿ, ಮಳೆ, ಫಲವತ್ತತೆ ಮತ್ತು ಜೀವಚಕ್ರದ ಸಂಕೇತವಾಗಿ ಕಾಣುವ ಜನಪದ ನಂಬಿಕೆಗಳೂ ಇದರೊಂದಿಗೆ ಬೆಸೆದುಕೊಂಡಿವೆ. ಆದರೆ ಹನ್ನೆರಡನೆಯ ಶತಮಾನದ ವಚನ ಚಳವಳಿಯು ಯಾವುದೇ ಆಚರಣೆಯನ್ನು ಕೇವಲ ಸಂಪ್ರದಾಯವೆಂಬ ಕಾರಣಕ್ಕೆ ಒಪ್ಪಿಕೊಳ್ಳದೆ, ಅದರ ಹಿಂದಿರುವ ಮಾನವೀಯತೆ, ಸತ್ಯ, ಅಸತ್ಯ, ನೈತಿಕತೆ ಮತ್ತು ವೈಚಾರಿಕತೆಯನ್ನು ಪ್ರಶ್ನಿಸುವ ದೃಷ್ಟಿಯನ್ನು ಬೆಳೆಸುತ್ತದೆ.

ನಾಗರಪಂಚಮಿಯ ಸಂದರ್ಭದಲ್ಲಿ ಅತ್ಯಂತ ಹೆಚ್ಚು ನೆನಪಿಗೆ ಬರುವ ಬಸವಣ್ಣನವರ ವಚನವೆಂದರೆ:

''ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ''

ಎಂಬ ಈ ವಚನದಲ್ಲಿ ಬಸವಣ್ಣನವರು, ಕಲ್ಲಿನಿಂದ ನಿರ್ಮಿಸಿದ ನಾಗರ ಮೂರ್ತಿಗೆ ಹಾಲೆರೆಯುವ ಜನರು ನಿಜವಾದ ಜೀವಂತ ನಾಗನನ್ನು ಕಂಡಾಗ ಅದನ್ನು ಕೊಲ್ಲಲು ಮುಂದಾಗುವರು ಎಂಬ ವೈರುಧ್ಯವನ್ನು ಎತ್ತಿ ತೋರಿಸುತ್ತಾರೆ. ಇಲ್ಲಿ ಬಸವಣ್ಣನವರ ಉದ್ದೇಶ ನಾಗಪೂಜೆಯನ್ನು ಮಾತ್ರ ಟೀಕಿಸುವುದಲ್ಲ; ಜೀವಂತ ಜೀವಿಯ ಮೇಲಿನ ಕರುಣೆಯನ್ನು ಬಿಟ್ಟು ನಿರ್ಜೀವ ಪ್ರತಿಮೆಯ ಮುಂದೆ ಮಾಡುವ ಆಚರಣೆಯ ಅರ್ಥವೇನು? ಎಂಬ ಮೂಲಭೂತ ಪ್ರಶ್ನೆಯನ್ನು ಸಮಾಜದ ಮುಂದಿಡುತ್ತದೆ.

ಅದೇ ವಚನದಲ್ಲಿ ಬಸವಣ್ಣನವರು ಮತ್ತೊಂದು ಗಂಭೀರವಾದ ಸಾಮಾಜಿಕ ಸಂದೇಶವನ್ನು ನೀಡುತ್ತಾರೆ. ಜೀವಂತವಾಗಿ ನಮ್ಮ ಮುಂದೆ ಬರುವ ಜಂಗಮನನ್ನು ನಿರ್ಲಕ್ಷಿಸುವವರು, ಉಣ್ಣದ ಲಿಂಗಕ್ಕೆ ನೈವೇದ್ಯ ಅರ್ಪಿಸುವುದರಲ್ಲಿ ಅರ್ಥ ಹುಡುಕುತ್ತಾರೆ ಎಂಬ ವೈರುಧ್ಯವನ್ನು ಅವರು ಪ್ರಶ್ನಿಸುತ್ತಾರೆ. ಅಂತಿಮವಾಗಿ, ನಿಜವಾದ ಶರಣರನ್ನು ಕಂಡು ಉದಾಸೀನರಾಗುವುದೇ ಆತ್ಮವಂಚನೆ ಎಂಬ ಸಂದೇಶವನ್ನು ನೀಡುತ್ತಾರೆ. ಹೀಗಾಗಿ ಈ ವಚನದ ಕೇಂದ್ರದಲ್ಲಿ ಆಚಾರಕ್ಕಿಂತ ಆಚಾರದ ಹಿಂದಿರುವ ಮೌಲ್ಯ, ಪ್ರತಿಮೆಯಿಗಿಂತ ಜೀವ, ಹೊರಗಿನ ಪೂಜೆಗಿಂತ ಒಳಗಿನ ಮಾನವೀಯತೆ ಮುಖ್ಯವಾಗುತ್ತದೆ.

ವಚನಕಾರರ ಚಿಂತನೆಯ ಪ್ರಮುಖ ವೈಶಿಷ್ಟ್ಯವೆಂದರೆ ಅವರು ಜನಸಾಮಾನ್ಯರ ಬದುಕಿನೊಂದಿಗೆ ನೇರವಾಗಿ ಸಂಬಂಧ ಹೊಂದಿರುವ ವಿಷಯಗಳನ್ನು ತಮ್ಮ ವಚನಗಳ ಮೂಲಕ ಚರ್ಚಿಸಿದರು. ವಚನ ಸಾಹಿತ್ಯವು ಕೇವಲ ದೇವರು ಮತ್ತು ಧಾರ್ಮಿಕ ಆಚರಣೆಗಳ ಕುರಿತು ಮಾತನಾಡದೆ, ಸಮಾಜದ ಸೂಕ್ಷ್ಮ ಸಮಸ್ಯೆಗಳು, ಮಾನವ ಸಂಬಂಧಗಳು, ಕಾಯಕ, ದಾಸೋಹ, ಸಮಾನತೆ, ನೈತಿಕತೆ ಮತ್ತು ಅಂಧಾಚಾರಗಳನ್ನೂ ಪ್ರಶ್ನಿಸುತ್ತದೆ.

ಆದ್ದರಿಂದ ಇಂದಿನ ನಾಗರಪಂಚಮಿಯ ಆಚರಣೆಯನ್ನೂ ವಚನದ ಬೆಳಕಿನಲ್ಲಿ ನೋಡಬೇಕಾದ ಅಗತ್ಯವಿದೆ. ಹಬ್ಬದ ಆಚರಣೆಯು ಜನರ ನಂಬಿಕೆ, ಸಂಸ್ಕೃತಿ ಮತ್ತು ಭಾವನೆಗಳೊಂದಿಗೆ ಸಂಬಂಧ ಹೊಂದಿರಬಹುದು. ಆದರೆ ಅದರ ಜತೆಗೆ ಜೀವಜಾಲದ ಮೇಲಿನ ಕರುಣೆ, ಪರಿಸರ ಸಂರಕ್ಷಣೆ ಮತ್ತು ವೈಚಾರಿಕ ಮನೋಭಾವ ಬೆಳೆಸುವುದು ಇನ್ನಷ್ಟು ಅರ್ಥಪೂರ್ಣ. ನಾಗನನ್ನು ದೇವರೆಂದು ಪೂಜಿಸುವುದಕ್ಕಿಂತ ಮೊದಲು ನಾಗವೂ ಪ್ರಕೃತಿಯ ಜೀವಿಯೆಂಬ ಅರಿವು ನಮ್ಮಲ್ಲಿ ಮೂಡಬೇಕು.

ಇಲ್ಲಿ ಬಸವಣ್ಣನವರ ಚಿಂತನೆ ಇಂದಿಗೂ ಪ್ರಸ್ತುತವಾಗುತ್ತದೆ. ಇಂದಿನ ಸಮಾಜದಲ್ಲಿ ಧಾರ್ಮಿಕ ಆಚರಣೆಗಳು ವಿಜ್ಞಾನ, ಪರಿಸರ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಸಂಘರ್ಷಿಸದಂತೆ ಅವುಗಳಿಗೆ ಹೊಸ ಅರ್ಥ ನೀಡಬೇಕಾಗಿದೆ. ನಾಗರ ಪಂಚಮಿಯನ್ನು ಕೇವಲ ಪೂಜೆ, ಹಾಲೆರೆಯುವಿಕೆ ಮತ್ತು ಸಂಪ್ರದಾಯದ ದಿನವನ್ನಾಗಿ ನೋಡದೆ, ಜೀವದಯೆ, ಪರಿಸರ ಕಾಳಜಿ ಮತ್ತು ಪ್ರಕೃತಿಯೊಂದಿಗೆ ಸಹಬಾಳ್ವೆಯ ಸಂಕೇತವಾಗಿ ಆಚರಿಸುವುದು ವಚನಕಾರರ ವೈಚಾರಿಕ ಪರಂಪರೆಗೆ ಹೆಚ್ಚು ಹತ್ತಿರವಾಗುತ್ತದೆ.

ವಚನಕಾರರ ದೃಷ್ಟಿಯಲ್ಲಿ ನಿಜವಾದ ಭಕ್ತಿ ಎಂದರೆ ಕೇವಲ ಬಾಹ್ಯ ಆಚರಣೆಯಲ್ಲ, ಅದು ಬದುಕಿನಲ್ಲಿ ವ್ಯಕ್ತವಾಗಬೇಕು ಎಂಬುದು. ಬಸವಣ್ಣನವರ ವಚನಗಳಲ್ಲಿ ಕಾಣುವ ಸಾಮಾಜಿಕ ಕಳಕಳಿ ಮತ್ತು ವೈಚಾರಿಕತೆ ಇದೇ ಸಂದೇಶವನ್ನು ನೀಡುತ್ತದೆ. ಆದ್ದರಿಂದ ನಾಗರ ಪಂಚಮಿಯಂದು ನಾಗನ ಪ್ರತಿಮೆಯ ಮುಂದೆ ಹಾಲು ಸುರಿಸುವುದಕ್ಕಿಂತ, ಜೀವಂತ ಜೀವಿಗಳ ಬಗ್ಗೆ ಕರುಣೆ ತೋರುವುದು, ಪ್ರಕೃತಿಯನ್ನು ರಕ್ಷಿಸುವುದು ಮತ್ತು ಜೀವಜಾಲದೊಂದಿಗೆ ಸಹಬಾಳ್ವೆ ನಡೆಸುವುದು ಈ ನಾಗರ ಪಂಚಮಿಯ ಹಬ್ಬದ ಅರ್ಥವನ್ನು ಮತ್ತಷ್ಟು ಗಾಢಗೊಳಿಸುತ್ತದೆ.

ನಾಗರಪಂಚಮಿ ನಮಗೆ ಒಂದು ಪ್ರಶ್ನೆಯನ್ನು ಕೇಳುತ್ತದೆ. ನಾವು ಪೂಜಿಸುವುದು ಕಲ್ಲಿನ ರೂಪವನ್ನೋ ಅಥವಾ ಅದರ ಮೂಲಕ ಜೀವದ ಮೌಲ್ಯವನ್ನು ಅರಿಯುವ ಸಂಸ್ಕೃತಿಯನ್ನೋ, ಬಸವಣ್ಣನವರ ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು, ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ ಎಂಬ ವಚನದ ವೈಚಾರಿಕ ಬೆಳಕಿನಲ್ಲಿ ನೋಡಿದಾಗ ಉತ್ತರ ಸ್ಪಷ್ಟವಾಗುತ್ತದೆ. ಆಚರಣೆಯ ಅಂತಿಮ ಗುರಿ ಮಾನವೀಯತೆ ಮತ್ತು ಪ್ರಾಣಿ ಪಕ್ಷಿಗಳ ಜೀವದಯೆಯಾಗಬೇಕು.

ನಾಗರಪಂಚಮಿ ಕೇವಲ ಒಂದು ಧಾರ್ಮಿಕ ಹಬ್ಬವಲ್ಲ, ಅದನ್ನು ಜನಪದ ಸಂಸ್ಕೃತಿ, ಪ್ರಕೃತಿಯ ಪ್ರೀತಿ, ಜೀವದಯೆ ಮತ್ತು ವೈಚಾರಿಕ ಚಿಂತನೆಯೊಂದಿಗೆ ಜೋಡಿಸುವ ಅವಕಾಶವಾಗಿಯೂ ಕಾಣಬಹುದು. ವಚನಕಾರರ ಈ ಚಿಂತನೆ ಇಂದಿನ ಪೀಳಿಗೆಗೂ ಪ್ರಸ್ತುತವಾಗಿದ್ದು, ಹಬ್ಬಗಳ ಆಚರಣೆಗೆ ಹೊಸ ಮಾನವೀಯ ಅರ್ಥವನ್ನು ನೀಡುವ ದಾರಿಯನ್ನು ತೋರಿಸುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR